ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ
Cell : 6360866626, 9036887793

KANNADA DAILY NEWS PAPER
ಕನ್ನಡ ದಿನಪತ್ರಿಕೆ

DAIRYADA DAARI
RNI NO: KNKAN/25/A2795

EMAIL : dairyadadaari@gmail.com
ಸಂಪುಟ: 01 ಸಂಚಿಕೆ: 214
ಬೆಲೆ ರೂ : 2.00
ರಾಯಚೂರು
ಪುಟ: 4
ಮಂಗಳವಾರ: 04-08-2026

### ಕಲ್ಯಾಣ ಕರ್ನಾಟಕ ಪ್ರದೇಶದಲ್ಲಿ ಹಿಂದುಳಿದಿದೆ ಹಣೆ ಪಟ್ಟಿಯಲ್ಲಿ ರಾಯಚೂರು

# ರಾಜಕೀಯದಲ್ಲಿ ಮತ್ತೆ ಹಿನ್ನಡೆ!

## ಸಚಿವ ಸ್ಥಾನಕ್ಕೆ ಚೊಂಬು,

## ಜಿಲ್ಲೆಯ ಜನರಿಗೆ ನಿರೀಕ್ಷೆ ಭಗ್ನ










**ರಾಯಚೂರು –:** ಜಿಲ್ಲೆಯ ಅಭಿವೃದ್ಧಿ, ನೀರಾವರಿ, ಕೈಗಾರಿಕೆ, ಉದ್ಯೋಗ, ಶಿಕ್ಷಣ ಹಾಗೂ ಮೂಲಸೌಕರ್ಯ ಸೇರಿದಂತೆ ಹಲವು ಪ್ರಮುಖ ವಿಷಯಗಳಲ್ಲಿ ರಾಜ್ಯ ಸರ್ಕಾರದ ವಿಶೇಷ ಗಮನ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಪರವಾಗಿ ಸಚಿವ ಸಂಪುಟದಲ್ಲಿ ಪ್ರಭಾವಿ ಧ್ವನಿ ಇರಬೇಕೆಂಬ ಒತ್ತಾಯ ಮತ್ತೊಮ್ಮೆ ಕೇಳಿಬಂದಿದೆ.

ಮುಖ್ಯಮಂತ್ರಿ ಡಿ ಕೆ ಶಿವಕುಮಾರ್ ನೇತೃತ್ವದ ಸರ್ಕಾರ ರಚನೆಯ ಸಂದರ್ಭದಲ್ಲಿ ಮೊದಲ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲೇ ರಾಯಚೂರು ಜಿಲ್ಲೆಗೆ ಸಚಿವ ಸ್ಥಾನ ಸಿಗದಿರುವುದು ಜಿಲ್ಲೆಯ ರಾಜಕೀಯ ವಲಯದಲ್ಲಿ ತೀವ್ರ ಚರ್ಚೆಗೆ ಕಾರಣವಾಗಿತ್ತು. ಆದರೆ, ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ಜಿಲ್ಲೆಯೊಬ್ಬರಿಗೆ ಸಚಿವ ಸ್ಥಾನ ದೊರೆಯಲಿದೆ ಎಂಬ ವಿಶ್ವಾಸದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಜಿಲ್ಲೆಯ ನಾಯಕರು ನಿರೀಕ್ಷೆಯಿಂದ ಕಾಯುತ್ತಿದ್ದರು.

ಎರಡನೇ ಪಟ್ಟಿಯಲ್ಲಿಯೂ ರಾಯಚೂರು ಜಿಲ್ಲೆಗೆ ಸಚಿವ ಸ್ಥಾನ ದೊರೆಯದಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಸಾರ್ವಜನಿಕರಲ್ಲಿ ಮತ್ತೆ ನಿರಾಸೆ ಮೂಡಿಸಿದೆ. ಜಿಲ್ಲೆಯ ಜನಪ್ರತಿನಿಧಿಗಳು, ಹಿರಿಯ ನಾಯಕರು ಹಾಗೂ ಪಕ್ಷದ ಮುಖಂಡರು ಸಚಿವ ಸ್ಥಾನಕ್ಕಾಗಿ ಪ್ರಯತ್ನ ನಡೆಸಿದ್ದರೂ ಅಂತಿಮ ಪಟ್ಟಿಯಲ್ಲಿ ಜಿಲ್ಲೆಯ ಹೆಸರಿಲ್ಲದಿರುವುದು ಅಚ್ಚರಿಗೆ ಕಾರಣವಾಗಿದೆ.

ರಾಯಚೂರು ಜಿಲ್ಲೆ ರಾಜ್ಯ ರಾಜಕೀಯದಲ್ಲಿ ಪ್ರಮುಖ ಸ್ಥಾನ ಹೊಂದಿದ್ದರೂ, ಸತತವಾಗಿ ಸಚಿವ ಸಂಪುಟದಲ್ಲಿ ಸಮರ್ಪಕ ಪ್ರಾತಿನಿಧ್ಯ ಸಿಗದಿರುವ ಬಗ್ಗೆ ಅಸಮಾಧಾನ ವ್ಯಕ್ತವಾಗುತ್ತಿದೆ. ಜಿಲ್ಲೆಯ ಅಭಿವೃದ್ಧಿಗೆ ಸಚಿವರ ಪ್ರಾತಿನಿಧ್ಯ ಅಗತ್ಯ ಎಂಬ ಅಭಿಪ್ರಾಯ ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತಿದೆ. ಜಿಲ್ಲೆಯ ನಾಯಕರ ನಡುವಿನ ಒಗ್ಗಟ್ಟಿನ ಕೊರತೆ, ಪಕ್ಷದ ಆಂತರಿಕ ರಾಜಕೀಯ, ಪ್ರಾದೇಶಿಕ ಹಾಗೂ ಜಾತಿ ಸಮೀಕರಣಗಳಂತಹ ಹಲವು ಅಂಶಗಳು ಸಚಿವ ಸ್ಥಾನ ಕೈತಪ್ಪಲು ಕಾರಣವಾಗಿರಬಹುದು ಎಂಬ ಚರ್ಚೆಗಳು ನಡೆಯುತ್ತಿವೆ. ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡ ಹಾಗೂ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ ಅವರಿಗೆ ಎರಡನೇ ಹಂತದ ಸಚಿವ ಸಂಪುಟ ವಿಸ್ತರಣೆಯಲ್ಲಿ ನೂರಕ್ಕೆ ನೂರು ಸಚಿವ ಸ್ಥಾನ ದೊರೆಯಲಿದೆ ಎಂದು ಅವರ ಆಪ್ತರು, ಬೆಂಬಲಿಗರು ವಿಶ್ವಾಸ ವ್ಯಕ್ತಪಡಿಸಿದ್ದರು. ಆದರೆ ಅಂತಿಮ ಪಟ್ಟಿಯಲ್ಲೂ ಅವರ ಹೆಸರು ಕಾಣಿಸದಿರುವುದು ಕಾರ್ಯಕರ್ತರಿಗೆ ನಿರಾಸೆ ಉಂಟುಮಾಡಿದೆ.


ಎರಡು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ರಾಯಚೂರು ಗ್ರಾಮೀಣ ಕ್ಷೇತ್ರದ ಶಾಸಕ ಬಸನಗೌಡ ದದ್ದಲ ಅವರಿಗೂ ಈ ಬಾರಿ ಸಚಿವ ಸ್ಥಾನ ಸಿಗಲಿದೆ ಎಂಬ ನಿರೀಕ್ಷೆ ಇತ್ತು. ಆದರೆ ಅವರ ಆಶೆಯೂ ಈಡೇರಲಿಲ್ಲ.

ಜಿಲ್ಲೆಯ ಹಿರಿಯ ಕಾಂಗ್ರೆಸ್ ನಾಯಕರುಗಳಾದ ಎನ್ ಎಸ್ ಬೋಸರಾಜು ಹಾಗೂ ಎ. ವಸಂತಕುಮಾರ್ ಅವರು ಪಕ್ಷದ ಸಂಘಟನೆ ಬಲಪಡಿಸಲು ರಾಜ್ಯದ ವಿವಿಧ ಭಾಗಗಳಲ್ಲಿ ಚುನಾವಣಾ ಪ್ರಚಾರ ನಡೆಸಿ, ಪಕ್ಷದ ಗೆಲುವಿಗೆ ಶ್ರಮಿಸಿದ ನಾಯಕರಾಗಿದ್ದಾರೆ. ಇಷ್ಟಾದರೂ ರಾಯಚೂರು ಜಿಲ್ಲೆಗೆ ಸಚಿವ ಸಂಪುಟದಲ್ಲಿ ಪ್ರಾತಿನಿಧ್ಯ ದೊರೆಯದಿರುವುದು ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸಾರ್ವಜನಿಕರಲ್ಲಿ ತೀವ್ರ ನಿರಾಶೆ ಮೂಡಿಸಿದೆ. 2ನೇಪುಟಕ್ಕೆ

## ಮಾನ್ವಿ ಕಲ್ಯಾಣ ಇಲಾಖೆ ಭ್ರಷ್ಟಾಚಾರ ಆರೋಪ: ಇಓ ನೋಟಿಸ್‌ಗೆ ಕಲ್ಯಾಣಾಧಿಕಾರಿಯಿಂದ ಇನ್ನು ಸಿಗದ ಉತ್ತರ!

ಧೈರ್ಯದ ದಾರಿ

**ಮಾನ್ವಿ:** ತಾಲೂಕಿನ ಪರಿಶಿಷ್ಟ ವರ್ಗಗಳ ಕಲ್ಯಾಣ ಅಧಿಕಾರಿಗಳಾದ ಶ್ರೀ ಭಾಗಯ್ಯ ನಾಯಕ್ ಅವರ ವಿರುದ್ಧ ಕೇಳಿಬಂದಿರುವ ವ್ಯಾಪಕ ಭ್ರಷ್ಟಾಚಾರ ಮತ್ತು ಸಾರ್ವಜನಿಕ ಅನುದಾನ ದುರುಪಯೋಗದ ದೂರಿಗೆ ಸಂಬಂಧಿಸಿದಂತೆ, ಮಾನ್ವಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಜಾರಿ ಮಾಡಿದ್ದ ಅಧಿಕೃತ ನೋಟಿಸ್‌ಗೆ ಇಲಾಖೆಯಿಂದ ಇದುವರೆಗೂ ಯಾವುದೇ ಉತ್ತರ ಅಥವಾ ಸ್ಪಷ್ಟ ಅಭಿಪ್ರಾಯ ಸಲ್ಲಿಕೆಯಾಗಿಲ್ಲ.ಈ ಪ್ರಕರಣದ ಹಿನ್ನೆಲೆಯನ್ನು ನೋಡುವುದಾದರೆ, ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿಯಾದ ಶ್ರೀ ಪ್ರಶಾಂತ ಜಾಗೀರಪನ್ನೂರು ಅವರು ಕಳೆದ ಜುಲೈ ಏಳರಂದು ತಾಲೂಕು ಪಂಚಾಯತ್‌ಗೆ ಲಿಖಿತ ದೂರೊಂದನ್ನು ಸಲ್ಲಿಸಿದ್ದರು.


ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ರಾಯಚೂರು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
ತಾಲೂಕ ಪಂಚಾಯತ ಕಾರ್ಯಾಲಯ ಮಾನವಿ
ಸಂ. ತಾ.ಪಂ.ಮಾ/ಇಲಾಖೆ/ದೂರು/2026-27/330 ದಿನಾಂಕ : 18.07.2026

ಗೆ,
ತಾಲೂಕ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು,
ಮಾನವಿ

ವಿಷಯ:- ಇಲಾಖೆ ಅಡಿಯಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ಬಿಲ್ಲುಗಳ ಆರ್ಥಿಕ ಅವ್ಯವಹಾರವನ್ನು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಜರುಗಿಸುವಂತೆ ದೂರು ಸಲ್ಲಿಸಿರುವ ಕುರಿತು..

ಉಲ್ಲೇಖ:- ಶ್ರೀ ಪ್ರಶಾಂತ ಜಾಗೀರಪನ್ನೂರು ಭೀಮಸೇನ ಕರ್ನಾಟಕ ವಿದ್ಯಾರ್ಥಿ ಘಟಕದ ರಾಜ್ಯ ಪ್ರಧಾನ ಕಾರ್ಯದರ್ಶಿ ಇವರ ದೂರು ಪತ್ರ ದಿನಾಂಕ : 07.07.2026

*** *** ****

ಕಾರ್ಯನಿರ್ವಾಹಕ ಅಧಿಕಾರಿಗಳು
ತಾಲೂಕ ಪಂಚಾಯತ ಮಾನವಿ

ಲಕ್ಷಾಂತರ ರೂಪಾಯಿ ನಷ್ಟ ಉಂಟುಮಾಡಿದ್ದಾರೆ ಎಂದು ವಿವರಿಸಲಾಗಿತ್ತು.

ಆ ದೂರಿನಲ್ಲಿ, ತಾಲೂಕು ಕಲ್ಯಾಣ ಅಧಿಕಾರಿ ಶ್ರೀ ಭಾಗಯ್ಯ ನಾಯಕ್ ಅವರು ವಿದ್ಯಾರ್ಥಿ ನಿಲಯಗಳ ಮೆಸ್ ಬಿಲ್, ಹಾಲು ಸರಬರಾಜು, ತರಕಾರಿ–ಮೊಟ್ಟೆ ಖರೀದಿ ಹಾಗೂ ಅಡುಗೆ ಅನಿಲ ಬಿಲ್‌ಗಳಲ್ಲಿ ವಾಸ್ತವಿಕತೆಗಿಂತ ಹೆಚ್ಚಿನ ಮೊತ್ತವನ್ನು ತೋರಿಸಿ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದಾರೆ ಎಂದು ಗಂಭೀರವಾಗಿ ಆರೋಪಿಸಲಾಗಿತ್ತು. ಅದರೊಂದಿಗೆ ಕಚೇರಿಯ ವಿದ್ಯುತ್, ನೀರಿನ ಬಿಲ್ ಹಾಗೂ ಬೆಡ್ಡಿಂಗ್ ಕಿಟ್ ಮತ್ತು ಸೋಪು–ಎಣ್ಣೆ ಭತ್ಯೆ ಬಿಲ್‌ಗಳಲ್ಲೂ ಭಾರಿ ಪ್ರಮಾಣದ ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡು ಸರ್ಕಾರದ ಬೊಕ್ಕಸಕ್ಕೆ ಲಕ್ಷಾಂತರ ರೂಪಾಯಿ ನಷ್ಟ ಉಂಟುಮಾಡಿದ್ದಾರೆ ಎಂದು ವಿವರಿಸಲಾಗಿತ್ತು.

ಈ ಗಂಭೀರ ದೂರು ಪತ್ರವನ್ನು ಪರಿಶೀಲಿಸಿದ ಮಾನ್ವಿ ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು, ಕಳೆದ ಜುಲೈ ಹದಿನೆಂಟರಂದು ಕ್ರಮ ಕೈಗೊಂಡು ಪತ್ರ ಸಂಖ್ಯೆ: ಸಂ. ತಾ.ಪಂ.ಮಾ/ಇಲಾಖೆ/ದೂರು/2026-27/330 ರ ಮೂಲಕ ತಾಲೂಕು ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಅಧಿಕೃತ ನೋಟಿಸ್ ಜಾರಿ ಮಾಡಿದ್ದರು. ಆ ನೋಟಿಸ್‌ನಲ್ಲಿ ದೂರು ಪತ್ರದ ಪ್ರತಿಯನ್ನು ಲಗತ್ತಿಸಿ, ಅದರಲ್ಲಿರುವ ಅಂಶಗಳ ಬಗ್ಗೆ ಕಚೇರಿಗೆ ತಕ್ಷಣವೇ 'ಸ್ಪಷ್ಟ ಅಭಿಪ್ರಾಯ' ಸಲ್ಲಿಸುವಂತೆ ಹಾಗೂ ಅರ್ಜಿದಾರರಿಗೆ ನಿಯಮಾನುಸಾರ ಹಿಂಬರಹ ನೀಡುವಂತೆ ಸೂಚಿಸಲಾಗಿತ್ತು. ಆದರೆ ನೋಟಿಸ್ ಜಾರಿಯಾಗಿ ದಿನಗಳು ಕಳೆದರೂ ಕಲ್ಯಾಣಾಧಿಕಾರಿಗಳು ಇದುವರೆಗೂ ಯಾವುದೇ ಲಿಖಿತ ಉತ್ತರ ಅಥವಾ ಸ್ಪಷ್ಟನೆ ನೀಡದೆ ಮೌನ ವಹಿಸಿರುವುದು ಸಾರ್ವಜನಿಕ ವಲಯದಲ್ಲಿ ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಜವಾಬ್ದಾರಿಯುತ ಅಧಿಕಾರಿಗಳ ಈ ನಿರಾಸಕ್ತಿಗೆ ಭೀಮಸೇನೆ ಕರ್ನಾಟಕ ವಿದ್ಯಾರ್ಥಿ ಘಟಕವು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದು, ತಕ್ಷಣವೇ ಉನ್ನತ ಮಟ್ಟದ ಆಡಿಟ್ ಅಥವಾ ತಾಲೂಕು ಮಟ್ಟದ ತನಿಖಾ ಸಮಿತಿಯ ಮೂಲಕ ಸಮಗ್ರ ಮರು–ಪರಿಶೀಲನೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದೆ.

## ಸಮುತ್ಕರ್ಷ ಸಂಸ್ಥೆಯಿಂದ ಶ್ರದ್ಧಾಮೇಧ ಪ್ರವೇಶ ಪರೀಕ್ಷೆ: ಅವಿನಾಶ್

ಧೈರ್ಯದ ದಾರಿ

**ಮಾನ್ವಿ :** ಪಟ್ಟಣದ ಕಾಕತೀಯ ಶಿಕ್ಷಣ ಸಂಸ್ಥೆಯ ಆವರಣದಲ್ಲಿ ಸಮುತ್ಕರ್ಷ ಐ.ಎ.ಎಸ್.ಪೂರ್ವಭಾವಿ ಸಿದ್ದತ ತರಬೇತಿ ಸಂಸ್ಥೆಯಿಂದ ನಡೆದ ಶ್ರದ್ಧಾಮೇಧ ಪ್ರವೇಶ ಪರೀಕ್ಷೆಗಳಿಗೆ ಚಾಲನೆ ನೀಡಿ ಸಮುತ್ಕರ್ಷ ಐ.ಎ.ಎಸ್.ಕ್ಯಾಂಪೇನ್ ರಾಯಚೂರು ಕೇಂದ್ರದ ಅವಿನಾಶ್ ಮಾತನಾಡಿ 6ರಿಂದ 9ನೇ ತರಗತಿಯ ವಿದ್ಯಾರ್ಥಿಗಳಿಗಾಗಿ ಶ್ರದ್ಧಾಮೇಧ ಪ್ರವೇಶ ಪರೀಕ್ಷೆಯನ್ನು ಆಯೋಜಿಸಲಾಗಿದು ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ವಿದ್ಯಾರ್ಥಿಗಳಿಗೆ ಪ್ರತಿ ಭಾನುವಾರ ಕಾಕತೀಯ ಶಿಕ್ಷಣ ಸಂಸ್ಥೆಯಲ್ಲಿ ಸಂಪನ್ಮೂಲ ವ್ಯಕ್ತಿಗಳಿಂದ ಒಟ್ಟು 14 ತರಗತಿಗಳನ್ನು ನಡೆಸಲಾಗುವುದು ತರಬೇತಿಯ ಸಮಯದಲ್ಲಿ ಮಕ್ಕಳಿಗೆ ಕುಟುಂಬಪ್ರಭೋಧನಾ ವೇದಿಕೆಯಲ್ಲಿ ಒತ್ತಡರಹಿತ ವಾತಾವರಣದಲ್ಲಿ ಮಕ್ಕಳು ಕಲಿಕೆಯನ್ನು ಮಾಡುವುದಕ್ಕೆ ಸೂಕ್ತ ಪರಿಸರವನ್ನುಪಾಲಕರು ಕಲ್ಪಿಸುವ ಕುರಿತು ಹಾಗೂ ಮಕ್ಕಳಿಗೆ ಪ್ರಚಲಿತ ವಿದ್ಯಾಮಾನಗಳ ಬಗ್ಗೆ ಮಾಹಿತಿ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಿದ್ದತೆ ಮಾಡಿಕೊಳ್ಳುವುದು, ನಾಯಕತ್ವಗುಣ, ವಾಗ್ಮಿಗಳಾಗುವುದು ಹೇಗೆ, ಪ್ರಸ್ತುತ ಜಗತ್ತು ಹಾಗೂ ಮಾರುಕಟ್ಟೆ ವ್ಯವಸ್ಥೆ ಬಗ್ಗೆ ,ತಮ್ಮ ವ್ಯಕ್ತಿತ್ವವನ್ನು ಹೇಗೆ ನಿರ್ಮಾಣ ಮಾಡಿಕೊಳ್ಳಬೇಕು, ಪಠ್ಯದ ಜೊತೆ ಸಂಸ್ಕಾರಗಳನ್ನು ರೂಢಿಸಿಕೊಳ್ಳುವುದು. ಸೇರಿದಂತೆ ಮಕ್ಕಳ ಸರ್ವಾಂಗೀಣ ಅಭಿವೃದ್ಧಿ ಕುರಿತು ಸೂಕ್ತವಾದ ತರಬೇತಿಯನ್ನು ನೀಡಲಾಗುವುದು ಎಂದು ತಿಳಿಸಿದರು.



ಕಾಕತೀಯ ಶಾಲೆಯ ಮುಖ್ಯಗುರು ವೀರಭದ್ರಗೌಡ, ಸಮುತ್ಕರ್ಷ ಸಂಸ್ಥೆಯ ಮಾನ್ವಿ ತಾಲೂಕು ಸಂಚಾಲಕರಾದ ಡಾ. ವಿವೇಕಾನಂದ ಹಬೀಬ್ ,ಸಮೀರ್ ಹಾಗೂ ನರಸಿಂಹ ಮೂರ್ತಿ ದೇಸಾಯಿ, , ನೇತಾಜಿ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಕೆ. ವಿಜಯಲಕ್ಷ್ಮಿ, ಶಾಂತಮೂರ್ತಿ ಭಾವಿಕಟ್ಟಿ, ಸ್ಟೆಪ್ಪಿಂಗ್ ಸ್ಟೋನ್ಸ್ ಶಾಲೆಯ ಕೃಷ್ಣಾರೆಡ್ಡಿ, ಅಮರಾವಣಿ , ಕಾಕತೀಯ ಸಂಸ್ಥೆಯ ರಜನಿ , ಪರಿಮಳ ಸೇರಿದಂತೆ ವಿವಿಧ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು,ಪಾಲಕರು ಭಾಗವಹಿಸಿದರು.

## ಅಗ್ನಿ ಅವಘಡ ಹೊತ್ತಿ ಉರಿದ ಸಂಜನಾ ಫೋಟೋ ಸ್ಟುಡಿಯೋ

ಧೈರ್ಯದ ದಾರಿ



**ಮಾನ್ವಿ –:** ತಾಲೂಕಿನ ಪೋತ್ನಾಳ ಗ್ರಾಮದಲ್ಲಿರುವ ಸಂಜನಾ ಫೋಟೋ ಸ್ಟುಡಿಯೋದಲ್ಲಿ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಅವಘಡದಿಂದ ಬೆಂಕಿಯ ಜ್ವಾಲೆಗೆ ಸ್ಟುಡಿಯೋದಲ್ಲಿದ್ದ ಬೆಲೆ ಬಾಳುವ ಉಪಕರಣಗಳು ಬೆಂಕಿಗೆ ಸುಟ್ಟು ಆಹುತಿಯಾಗಿವೆ. ಅವಘಡದಲ್ಲಿ ಕ್ಯಾಮೆರಾ, ಕಂಪ್ಯೂಟರ್, ಪ್ರಿಂಟರ್ ಸೇರಿದಂತೆ ವಿವಿಧ ಫೋಟೋಗ್ರಫಿ ಮತ್ತು ಡಿಜಿಟಲ್ ಸೇವೆಗೆ ಬಳಸಲಾಗುತ್ತಿದ್ದ ಉಪಕರಣಗಳು ಸುಟ್ಟು ಕರಕಲಾಗಿದ್ದು, ಸುಮಾರು 5 ಲಕ್ಷಕ್ಕೂ ಅಧಿಕ ಮೌಲ್ಯದ ಆಸ್ತಿ ನಷ್ಟ ಸಂಭವಿಸಿದೆ ಎಂದು ತಿಳಿದುಬಂದಿದೆ. ಅದೃಷ್ಟವಶಾತ್ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ, ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿರುವ ಶಂಕೆ ವ್ಯಕ್ತವಾಗಿದ್ದು, ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ ನಷ್ಟದ ಪ್ರಮಾಣವನ್ನು ಅಂದಾಜಿಸಿದ್ದಾರೆ. ಸ್ಥಳೀಯರು ಸಂತ್ರಸ್ತರಿಗೆ ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಯಿಂದ ಸೂಕ್ತ ಪರಿಹಾರ ಒದಗಿಸಬೇಕು ಎಂದು ಆಗ್ರಹಿಸಿದ್ದಾರೆ.

## ವಾರ್ಡ್ ನಂ 16 ರಲ್ಲಿನ ರಾಜಕಾಲುವೆ ಒತ್ತುವರಿ ತೆರವುಗೊಳಿಸುವಂತೆ ಮನವಿ

ಧೈರ್ಯದ ದಾರಿ



**ಮಾನ್ವಿ:** ಪಟ್ಟಣದ ತಹಶೀಲ್ದಾರ್ ಕಚೇರಿಯಲ್ಲಿ ವಾರ್ಡ್ ನಂ 16 ರಲ್ಲಿ ವಾಸ ಮಾಡುತ್ತಿರುವ ನಿವಾಸಿಗಳಿಂದ ತಹಶೀಲ್ದಾರ್ ರವರಿಗೆ ಉಪ ತಹಶೀಲ್ದಾರ್ ನಾಗರಾಜ .ಆರ್. ರವರ ಮೂಲಕ ಮನವಿ ಸಲ್ಲಿಸಿ ಕೆ.ಈ.ನರಸಿಂಹ ಮಾತನಾಡಿ ವಾರ್ಡ್ ನಂ 16 ರಲ್ಲಿ ಬರುವ ಸರ್ವೆನಂ 508 ರಲ್ಲಿ ಬರುವ ವಿವಿಧ ಜಮೀನುಗಳ ಮಾಲೀಕರು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿಕೊಂಡು ಈ ಭಾಗದಲ್ಲಿ ಬರುವ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಂಡು ಕಿರಿದಾದ ಚರಂಡಿಯನ್ನು ನಿರ್ಮಾಣ ಮಾಡಿರುವುದರಿಂದ ನಾಲಾ ರೋಡ್ ನಿಂದ ಬರುವ ಚರಂಡಿ ನೀರು ಹಾಗೂ ಸಿಮೇಂಟ್ ರೋಡ್ ,ಹಿರೇಬಾವಿ ನೀರು ಕೂಡ ರಾಜಕಾಲುವೆಗೆ ಸೇರುವುದರಿಂದ ರಾಜಕಾಲುವೆಯ ಒತ್ತುವರಿಯಿಂದಾಗಿ ಚರಂಡಿ ನೀರು ಸರಾಗವಾಗಿ ಹರಿದು ಹೋಗುವುದಕ್ಕೆ ಸಾಧ್ಯವಾಗದೆ ಇರುವುದರಿಂದ ಮಳೆಗಾಲದಲ್ಲಿ ರಾಜಕಾಲುವೆಯ ಹತ್ತಿರದ ಈ ಭಾಗದ ತಗ್ಗು ಪ್ರದೇಶದಲ್ಲಿರುವ ಮನೆಗಳಿಗೆ ನೀರು ನುಗ್ಗುತ್ತದೆ. ಅದ್ದರಿಂದ ಪುರಸಭೆ ಯಿಂದ ರಾಜಕಾಲುವೆ ಒತ್ತುವರಿಯನ್ನು ತೆರವುಗೊಳ್ಳಿಸಬೇಕು ಅಲ್ಲಿಯವರೆಗೂ ಈ ವಸತಿ ವಿನ್ಯಾಸದಲ್ಲಿನ ನಿವೇಶನಗಳಿಗೆ ಪರವಾನಿಗೆಯನ್ನು ನೀಡಬಾರದು ಎಂದು ಒತ್ತಾಯಿಸಿದರು.

ವೀರೇಶ.ಡಿ, ಮಾಜಿ ಪುರಸಭೆ ಸದಸ್ಯರಾದ ರೇವಣಸಿದ್ದಯ್ಯಸ್ವಾಮಿ,ಮದಮ್ ಬಸವರಾಜ, ಲಕ್ಷ್ಮಣ ಭಂಡರಿ, ಕೆ.ವೆಂಕಟೇಶ, ಕೆ.ಎನ್.ನಾಗರಾಜ, ನಾಗೇಶ ಕಬೇರ್, ಶಿವಕುಮಾರ ಸಜ್ಜನ್, ಕಾಂತಪ್ಪ, ಕೃಷ್ಣ, ಪಿ.ರವಿಕುಮಾರ, ರಾಮಾಂಜನೇಯ್ಯ, ಈರಣ್ಣ, ವೆಂಕಟೇಶ ಸೇರಿದಂತೆ ಇನ್ನಿತರರು ಇದ್ದರು.

ಮೊದಲನೇ ಪುಟದಿಂದ

# ರಾಜಕೀಯದಲ್ಲಿ ಮತ್ತೆ ಹಿನ್ನಡೆ:

ಎರಡನೇ ಪಟ್ಟಿಯಲ್ಲೂ ಸಚಿವ ಸ್ಥಾನ ಸಿಗದ ಹಿನ್ನೆಲೆಯಲ್ಲಿ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಸಮಾಧಾನ ವ್ಯಕ್ತವಾಗಿದ್ದು, ಮುಂದಿನ ದಿನಗಳಲ್ಲಿ ಪಕ್ಷದ ವರಿಷ್ಠರು ರಾಯಚೂರು ಜಿಲ್ಲೆಗೆ ಸೂಕ್ತ ರಾಜಕೀಯ ಪ್ರಾತಿನಿಧ್ಯ ಕಲ್ಪಿಸುತ್ತಾರೆಯೇ ಎಂಬ ಪ್ರಶ್ನೆ ಈಗ ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ರಾಯಚೂರು ಜಿಲ್ಲೆಯ ಅಭಿವೃದ್ಧಿ, ನೀರಾವರಿ, ಕೈಗಾರಿಕೆ, ಉದ್ಯೋಗ, ಶಿಕ್ಷಣ ಹಾಗೂ ಮೂಲಸೌಕರ್ಯ ಸೇರಿದಂತೆ ಹಲವು ಪ್ರಮುಖ ವಿಷಯಗಳಲ್ಲಿ ರಾಜ್ಯ ಸರ್ಕಾರದ ವಿಶೇಷ ಗಮನ ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯ ಪರವಾಗಿ ಸಚಿವ ಸಂಪುಟದಲ್ಲಿ ಪ್ರಭಾವಿ ಧ್ವನಿ ಇರಬೇಕೆಂಬ ಒತ್ತಾಯ ಮತ್ತೊಮ್ಮೆ ಕೇಳಿಬಂದಿದೆ.

# ಮಾವಿನಕೆರೆ ಆಸ್ಪತ್ರೆಯಲ್ಲಿ ಎದೆ ಹಾಲಿನ ಮಹತ್ವ ಕಾರ್ಯಕ್ರಮಕ್ಕೆ ಚಾಲನೆ




ಧೈರ್ಯದ ದಾರಿ

**ರಾಯಚೂರು ಆಗಸ್ಟ್ 03:** ಮಗುವಿನಲ್ಲಿ ರೋಗ ನಿರೋಧಕ ಶಕ್ತಿಯನ್ನು ವೃದ್ಧಿಗೊಳಿಸಿ ಮಗುವಿಗೆ ಕಾಯಿಲೆಗಳು ಬರದಂತೆ ತಡೆಯುವ ಶಕ್ತಿ ತಾಯಿಯ ಎದೆ ಹಾಲಿನಲ್ಲಿದೆ ಎಂದು ರಾಯಚೂರು ತಾಲೂಕು ಪ್ರಭಾರಿ ಆರೋಗ್ಯಾಧಿಕಾರಿ ಡಾ.ಸತೀಶ್ ಅವರು ಹೇಳಿದರು.

ಆಗಸ್ಟ್ 03ರ ಸೋಮವಾರ ದಂದು ನಗರದ ಮಾವಿನಕೆರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕಾ ಆರೋಗ್ಯ ಅಧಿಕಾರಿಗಳ ಕಾರ್ಯಾಲಯ, ಜಹೀರಾಬಾದ್ ಹಾಗೂ ರಾಗಿಮಾನಗಡ್ಡಾ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ನವೋದಯ ವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಸ್ತನ್ಯಪಾನ ಸಪ್ತಾಹ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.


ನಮ್ಮ ದೇಶದ ಸಾಮಾಜಿಕ ವ್ಯವಸ್ಥೆಯು ಮಗುವಿಗೆ ಬಹು ದಿನಗಳವರೆಗೆ ಹಾಲುಣಿಸುವ ತಾಯ್ತನದ ಬಾಂಧವ್ಯವಿದೆ. ಆದರೆ ಹೆರಿಗೆಯ ತಕ್ಷಣ ರೋಗನಿರೋಧಕ ಶಕ್ತಿ ನೀಡುವ ಹಳದಿ ವರ್ಣದ ಕೊಲೆಸ್ಟ್ರಾಂ ದೊರಕುವುದರಿಂದ ನವಜಾತ ಶಿಶುವಿಗೆ ಹಾಲುಣಿಸುವುದಕ್ಕೆ ತಾಯಿಗೆ ಪಾಲಕರು, ಪೋಷಕರು ಕೈಜೊಡಿಸಬೇಕು ಎಂದರು.

ಮಾವಿನಕರೆ ಆಸ್ಪತ್ರೆಯ ಆಡಳಿತ ವೈದ್ಯಾಧಿಕಾರಿ ಡಾ.ಅರುಣಾ ಅವರು ಮಾತನಾಡಿ, ಗರ್ಭಿಣಿಯೆಂದು ತಿಳಿದ ದಿನದಿಂದಲೇ ತಾಯಿ ನಿಯಮಿತ ತಪಾಸಣೆ, ಪೌಷ್ಟಿಕ ಆಹಾರ ಸೇವನೆ, ರಕ್ತಹೀನತೆಯಾಗದಂತೆ ಕಾಯಿಪಲ್ಯ ಸೇವನೆ ಮಾಡುವುದರಿಂದ ಹೆರಿಗೆ ಸಮಯದಲ್ಲಿ ಕನಿಷ್ಠ 2.5ಕೆಜಿ ತೂಕದೊಂದಿಗೆ ಮಗುವಿನ ಜನನಕ್ಕೆ ಸಹಾಯಕವಾಗುವುದು. ಅಲ್ಲದೆ ಮಗುವಿನ ವಯಸ್ಸು ಆರು ತಿಂಗಳು ತುಂಬುವವರೆಗೂ ಕೇವಲ ಎದೆಹಾಲನ್ನು ಮಾತ್ರ ನೀಡಬೇಕಿದೆ.

ಇದರಿಂದ ತಾಯಿ ಮತ್ತು ಮಗುವಿನ ಬಾಂಧವ್ಯ ವೃದ್ಧಿಸುವ, ರಕ್ತಸ್ರಾವ ತಡೆಯುವ, ಗರ್ಭಿಣಿ ಅವಧಿಯ ಬೊಜ್ಜು ಕರುಗಿಸುವ, ಮಹಿಳೆಗೆ ಬರಬಹುದಾದ ಸ್ತನ ಕ್ಯಾನ್ಸರ್ ದೂರಮಾಡುತ್ತದೆ ಎಂದರು.

ನವೋದಯ ಮಹಾವಿದ್ಯಾಲಯದ ಮಕ್ಕಳ ತಜ್ಞ ಡಾ.ಮಹೀಜ್,ಪ್ರೋಪೇಸರ್ ಡಾ.ಹರ್ಷಿಯಾ ತರನುಮ್, ರಿಮ್ಸ್ ಮಕ್ಕಳ ವಿಭಾಗದ ಡಾ.ಶಾಲಂ ಪಾಷಾ ಹಾಗೂ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರ ಹೆಚ್ ದಾಸಪ್ಪನವರ ಮಾತನಾಡಿದರು. ಕಾರ್ಯಕ್ರಮದಲ್ಲಿ ರಿಮ್ಸ್ ಮಕ್ಕಳ ತಜ್ಞೆ ಡಾ.ಶೀಲ್ಪಾ, ಜಹೀರಾಬಾದ್ ವೈದ್ಯಾಧಿಕಾರಿ ಡಾ.ಆಸ್ಥಾಕ್ ಹುಸೇನ್, ನವೋದಯ ಕಾಲೇಜಿನ ಪಿಎಸ್‌ಎಮ್ ವಿಭಾಗದ ಡಾ.ಲಕ್ಷ್ಮೀ, ಡಾ.ಭವಾನಿ, ಡಾ.ಭಾಗ್ಯಶ್ರೀ, ಉಪ ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಬಸಯ್ಯ, ಹಿರಿಯ ಹೆಚ್‌ಐಓ ಸುರೇಶ್, ಶೂಶ್ರೂಷಣಾಧಿಕಾರಿ ಅನಸೂಯಾ, ಮಮತ, ಗಿರಿಜಾ, ಎಮ್‌ಟಿಎಸ್ ಸಂಧ್ಯಾ, ಪಿಹೆಚ್‌ಸಿಓ ಮರಿಯಾರಾಣಿ, ಶಾರದಾ, ಮಹೇಶ್ವರಿ, ಮಲ್ಲೇಶ್ವರಿ, ಅನ್ನಪೂರ್ಣ, ಮಲ್ಲಮ್ಮ, ಹೆಚ್‌ಐಓ ಶೃತಿ ಸೇರಿದಂತೆ ಆಶಾ ಕಾರ್ಯಕರ್ತೆಯರು, ತಾಯಂದಿರು, ಇತರರು ಇದ್ದರು.

# ಕೆಆರ್ ಎಸ್ ನೀರಿನ ಮಟ್ಟ ನೂರು ಅಡಿ



**ಬೆಂಗಳೂರು, ಆ.3**–ಕಾವೇರಿ ಕೊಳ್ಳದಲ್ಲಿ ಮಳೆ ಬಿರುಸು ಪಡೆದಿರುವ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲೆ ಜೀವನಾಡಿ ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ಕೃಷ್ಣರಾಜ ಸಾಗರ ಜಲಾಶಯದ ನೀರಿನ ಮಟ್ಟ 100 ಅಡಿ ಗಡಿ ತಲುಪಿದೆ.

ಕಾವೇರಿ ಹಾಗೂ ಮಲೆನಾಡು ಜಲಾನಯನ ಪ್ರದೇಶಗಳಲ್ಲಿ ಸುರಿಯುತ್ತಿರುವ ಮುಂಗಾರು ಮಳೆಯಿಂದಾಗಿ ರಾಜ್ಯದ ಪ್ರಮುಖ ಜಲಾಶಯಗಳಿಗೆ ಹರಿದುಬರುತ್ತಿರುವ ಒಳಹರಿವಿನ ಪ್ರಮಾಣದಲ್ಲಿ ಗಣನೀಯ ಪ್ರಮಾಣದಲ್ಲಿ ಏರಿಕೆ ಕಂಡುಬಂದಿದೆ.

ಕೇವಲ ಮೂರು ದಿನಗಳ ಅಂತರದಲ್ಲೇ ಕೆ.ಆರ್.ಎಸ್ ಜಲಾಶಯದ ನೀರಿನ ಮಟ್ಟದಲ್ಲಿ 8 ಅಡಿ ಏರಿಕೆ ಕಂಡುಬಂದಿದ್ದು, ಪ್ರಸ್ತುತ 23 ಟಿಎಂಸಿ ನೀರು ಸಂಗ್ರಹವಾಗಿದೆ. ಜಲಾಶಯಕ್ಕೆ ಭಾರೀ ಪ್ರಮಾಣದ ಒಳಹರಿವು ಮುಂದುವರಿದಿದ್ದು, ಇದೇ ವೇಗದಲ್ಲಿ ಇನ್ನು 10 ರಿಂದ 15 ದಿನಗಳ ಕಾಲ ನೀರು ಹರಿದುಬಂದರೆ ಕೆ.ಆರ್.ಎಸ್ ಸಂಪೂರ್ಣ ಭರ್ತಿಯಾಗುವ ನಿರೀಕ್ಷೆಯಿದೆ. ಹಾಸನ ತಾಲೂಕಿನ ಗೊರೂರು ಸಮೀಪದ ಹೇಮಾವತಿ ಜಲಾಶಯದಲ್ಲೂ ನೀರಿನ ಪ್ರಮಾಣ ಗಣನೀಯವಾಗಿ ಹೆಚ್ಚಾಗಿದೆ. ಕಳೆದ ವರ್ಷ ಇದೇ ದಿನ 2921.40 ಅಡಿ (36.523 ಟಿಎಂಸಿ) ನೀರಿತ್ತು. ಆಗ 5,252 ಕ್ಯೂಸೆಕ್ ಒಳಹರಿವು, ನದಿಗೆ 2,400 ಕ್ಯೂಸೆಕ್ ಹಾಗೂ ಕಾಲುವೆಗೆ 4,300 ಕ್ಯೂಸೆಕ್ ಹೊರಹರಿವು ಇತ್ತು.

ಮಲೆನಾಡು ಭಾಗದಲ್ಲಿ ಆರ್ಭಟಿಸುತ್ತಿರುವ ಮಳೆಯಿಂದಾಗಿ ಕೊಪ್ಪಳ ಜಿಲ್ಲೆಯ ಮುನಿರಾಬಾದ್‌ನಲ್ಲಿರುವ ತುಂಗಭದ್ರಾ ಜಲಾಶಯಕ್ಕೆ ಹರಿದುಬರುವ ಒಳಹರಿವಿನಲ್ಲಿ ಭಾರೀ ಏರಿಕೆಯಾಗಿದೆ. ಒಂದೇ ದಿನದಲ್ಲಿ ಜಲಾಶಯದಲ್ಲಿ 4 ಟಿಎಂಸಿ ನೀರು ಸಂಗ್ರಹಗೊಂಡಿದ್ದು, ಕೊಪ್ಪಳ ಸೇರಿದಂತೆ ನಾಲ್ಕು ಜಿಲ್ಲೆಗಳ ರೈತರ ಮುಖದಲ್ಲಿ ಮಂದಹಾಸ ಮೂಡಿಸಿದೆ

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಡಿಕೆಶಿ ಸಂಪುಟ ವಿಸ್ತರಣೆ:19 ಮಂದಿ ನೂತನ ಸಚಿವರ ಪದಗ್ರಹಣ




ಬೆಂಗಳೂರು, ಆ.3– ಮುಖ್ಯಮಂತ್ರಿ .ಡಿ.ಕೆ.ಶಿವಕುಮಾರ್ ಅವರು ತಮ್ಮ ಮಂತ್ರಿ ಮಂಡವಲವನ್ನು ವಿಸ್ತರಿಸಿದ್ದಾರೆ. 19 ಮಂದಿ ನೂತನ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು.

ಲೋಕಭವನದ ಗಾಜಿನ ಮನೆಯಲ್ಲಿ ಇಂದು ಸಂಜೆ ನಡೆದ ವರ್ಣರಂಜಿತ ಸಮಾರಂಭದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಲ್ಹೋಟ್ ನೂತನ ಸಚಿವರಿಗೆ ಪ್ರತಿಜ್ಞಾವಿಧಿ ಭೋಧಿಸಿದರು.

ಡಾ.ಅಜಯ್ ಸಿಂಗ್ , ಎಚ್. ಸಿ ಬಾಲಕೃಷ್ಣ, ಕೆ. ಎಸ್. ಬಸವಂತಪ್ಪ, ದೇವರ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರು.

ಬಸವರಾಜ ರಾಯರೆಡ್ಡಿ, ಎನ್.ಚಲುವರಾಯಸ್ವಾಮಿ ದೇವರ ಹಾಗೂ ಅಜ್ಜಯನ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಲಕ್ಷ್ಮಣ್ ಸವದಿ, ಮಧು ಬಂಗಾರಪ್ಪ , ಶಾಸಕರಾಗಿರುವ ಎಸ್. ಎಸ್. ಮಲ್ಲಿಕಾರ್ಜುನ , ಬಿ. ನಾಗೇಂದ್ರ ದೇವರ ಹೆಸರಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ನರೇಂದ್ರ ಸ್ವಾಮಿ ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಗಂಗಾಧರ ಅಜ್ಜಯ್ಯ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ, ಪುಟ್ಟರಂಗ ಶೆಟ್ಟಿ, ಶಾಸಕರಾಗಿರುವ ರಘು ಮೂರ್ತಿ ದೇವರ ಹೆಸರಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ರಿಜ್ವಾನ್ ಅರ್ಷದ್ ರುದ್ರಪ್ಪ ಲಮಾಣಿ , ಸಂತೋಷ್ ಲಾಡ್, ಶಿವಲಿಂಗೇಗೌಡ , ಶಿವರಾಜ ತಂಗಡಗಿ ದೇವರ ಹೆಸರಲ್ಲಿ ಪ್ರಮಾಣವಚನ ಸ್ವೀಕರಿಸಿದರು.

ವಿಜಯಾನಂದ ಕಾಶಪ್ಪನವರ್ ಪಂಚಮ ಪೀಠ, ಬುದ್ಧ ಬಸವ ಹಾಗೂ ಸಂವಿಧಾನದ ಹೆಸರಲ್ಲಿ ಪ್ರಮಾಣ ವಚನ ಸ್ವೀಕರಿಸಿದರೆ, ಜಮೀರ್ ಅಹ್ಮದ್ ಖಾನ್ ಅಲ್ಲಾಹು ಹೆಸರಿನಲ್ಲಿ ಇಂಗ್ಲೀಷ್ ನಲ್ಲಿ ಪ್ರಮಾಣವಚನ ಸ್ವೀಕರಿಸಿದರು.

19 ಸಚಿವರು ಪಶ್ಚಿಮಕ್ಕೆ ಅಭಿಮುಖವಾಗಿ ನಿಂತು ಪ್ರಮಾಣವಚನ ಸ್ವೀಕರಿಸಿದರು. ಈ ಹಿಂದೆ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು 13 ಸಚಿವರು ಪೂರ್ವಕ್ಕೆ ಅಭಿಮುಖವಾಗಿ ನಿಂತು ಪ್ರಮಾಣ ವಚನ ಸ್ವೀಕರಿಸಿದ್ದರು.

ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ ಸುರ್ಜೇವಾಲ, ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಭಾಗವಹಿಸಿದ್ದರು. ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಗೈರುಹಾಜರಾಗಿದ್ದರು.

# ಸ್ವಾತಂತ್ರ್ಯ ದಿನಾಚರಣೆ ಕುರಿತು ಇಂದು ಪೂರ್ವಭಾವಿ ಸಭೆ

**ರಾಯಚೂರು ಆಗಸ್ಟ್ 03:** ಆಗಸ್ಟ್ 15ರಂದು ಸ್ವಾತಂತ್ರೋತ್ಸವ ದಿನಾಚರಣೆ ಆಚರಣೆ ಕುರಿತು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಆಗಸ್ಟ್ 04ರ ಬೆಳಿಗ್ಗೆ 11ಕ್ಕೆ ಪೂರ್ವಭಾವಿ ಸಭೆಯನ್ನು ಹಮ್ಮಿಕೊಳ್ಳಲಾಗಿದ್ದು, ಸಂಬಂಧಿಸಿದ ಅಧಿಕಾರಿಗಳು ಕಡ್ಡಾಯವಾಗಿ ಸಭೆಗೆ ಹಾಜರಾಗಿ ಕಾರ್ಯಕ್ರಮಗಳನ್ನು ರೂಪಿಸಿ, ಸಮರ್ಪಕವಾಗಿ ಅನುಷ್ಠಾನಗೊಳಿಸುವ ಸಂಬಂಧ ತಮ್ಮ ಅಮೂಲ್ಯವಾದ ಸಲಹೆ ಸೂಚನೆಗಳನ್ನು ನೀಡಿ ಈ ಸಭೆಯನ್ನು ಯಶಸ್ವಿಗೊಳಿಸುವಂತೆ ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಿಂಧನೂರಿನಲ್ಲಿ ಆಗಸ್ಟ್ 14ರಂದು ಉದ್ಯಮಶೀಲತಾ ತರಬೇತಿ ಕಾರ್ಯಕ್ರಮ

**ರಾಯಚೂರು ಆಗಸ್ಟ್ 03:** ಕರ್ನಾಟಕ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕರ್ನಾಟಕ ಉದ್ಯಮಶೀಲತಾಭಿವೃದ್ಧಿ ಕೇಂದ್ರ (ಸಿಡಾಕ್), ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ಸ್ವಂತ ಉದ್ಯೋಗವನ್ನು ಸ್ಥಾಪಿಸಲು ಇಚ್ಚಿಸಿದ ಎಲ್ಲಾ ವರ್ಗದ ಮಹಿಳಾ ಅಭ್ಯರ್ಥಿಗಳಿಗೆ 10 ದಿನಗಳ ಉದ್ಯಮಶೀಲತಾ ಅಭಿವೃದ್ಧಿ ತರಬೇತಿ ಕಾರ್ಯಕ್ರಮವನ್ನು ಆಗಸ್ಟ್ 14ರಂದು ಜಿಲ್ಲೆಯ ಸಿಂಧನೂರಿನಲ್ಲಿ ಹಮ್ಮಿಕೊಳ್ಳಲಾಗಿದೆ.

ತರಬೇತಿಯಲ್ಲಿ ಸ್ವಂತ ಉದ್ಯಮವನ್ನು ಸ್ಥಾಪಿಸಲು ಅನುಸರಿಸಬೇಕಾದ ಕ್ರಮಗಳು, ಉದ್ಯಮಶೀಲತೆಯ ಗುಣಲಕ್ಷಣಗಳು ಸ್ವಂತ ಉದ್ಯೋಗ ಸ್ಥಾಪಿಸಲು ಸರ್ಕಾರದ ಯೋಜನೆಗಳು, ಬ್ಯಾಂಕಿನ ವ್ಯವಹಾರ ಮತ್ತು ಸಾಲ ಸೌಲಭ್ಯಗಳ ಮಾಹಿತಿ ಹಾಗೂ ಸ್ವಯಂ ಉದ್ಯಮಗಳನ್ನು ಸ್ಥಾಪಿಸಲು ಇತ್ಯಾದಿ ವಿಷಯಗಳ ಕುರಿತು ಮಾಹಿತಿಯನ್ನು ನೀಡಲಾಗುವುದು.

ರಾಯಚೂರು ಜಿಲ್ಲೆಯ ಆಸಕ್ತ ಎಲ್ಲಾ ವರ್ಗದ ಮಹಿಳಾ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅಭ್ಯರ್ಥಿಗಳು 18 ವರ್ಷ ದಿಂದ 45 ವರ್ಷ ವಯಸ್ಸಿನವರಾಗಿರಬೇಕು 8ನೇ ತರಗತಿ ಯಿಂದ ಎಸ್.ಎಸ್.ಎಲ್.ಸಿ ವರಗೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಸಕ್ತರಿರುವವರು ಆಗಸ್ಟ್ 10ರೊಳಗಾಗಿ ಮೊಬೈಲ್ ಸಂಖ್ಯೆ: 9986600631ಗೆ ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಅಥವಾ ಸಲಹೆಗಾರರು, ಸಿಡಾಕ್, ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿಗಳ ಕಚೇರಿ ನವೀನ ಆಸ್ಪತ್ರೆ ಪಕ್ಕದಲ್ಲಿ ರಾಯಚೂರು ಇಲ್ಲಿಗೆ ಬಂದು ಅರ್ಜಿ ಸಲ್ಲಿಸಬಹುದಾಗಿದೆ ಎಂದು ಸಿಡಾಕ್ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಆಗಸ್ಟ್ 04ರಂದು ಜಂಬಲ್ಲದಿನ್ನಿ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ರಾಯಚೂರು ಆಗಸ್ಟ್ 03:** ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ವ್ಯಾಪ್ತಿಗೆ ಬರುವ ಜಂಬಲ್ಲದಿನ್ನಿ ಗ್ರಾಮದಲ್ಲಿ ತುರ್ತು ಕಾಮಗಾರಿ ಹಮ್ಮಿಕೊಂಡಿರುವ ಪ್ರಯುಕ್ತ ಆಗಸ್ಟ್ 04ರ ಬೆಳಿಗ್ಗೆ 10ರಿಂದು ಸಂಜೆ 5 ಗಂಟೆವರೆಗೆ ಗ್ರಾಮೀಣ ಭಾಗದ ವೈ.ಮಲ್ಲಾಪುರ, ಜಂಬಲದಿನ್ನಿ, ಕೊತ್ತದೊಡ್ಡಿ, ಕನ್ನದೊಡ್ಡಿ, ಮಾಲದೊಡ್ಡಿ, ಎಲ್.ಕೆ.ದೊಡ್ಡಿ, ಜುಲಮಗೇರಾ, ಜುಲಮಗೇರಾ ತಾಂಡ, ಮಾಸದೊಡ್ಡಿ, ಮುರ್ಖಿದೊಡ್ಡಿ ಗ್ರಾಮಗಳ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ವಯೋಶ್ರೇಷ್ಠ ರಾಜ್ಯ ಪ್ರಶಸ್ತಿಗೆ ಪ್ರಸ್ತಾವನೆ ಸಲ್ಲಿಸಲು ಅರ್ಜಿ ಆಹ್ವಾನ

**ರಾಯಚೂರು ಆಗಸ್ಟ್ 03:** ವಿಶ್ವ ಹಿರಿಯ ನಾಗರೀಕರ ದಿನಾಚರಣೆ–2026ರ ಸಂಬಂಧ ಹಿರಿಯ ನಾಗರೀಕರ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸಿದ ವಯೋಶ್ರೇಷ್ಠ ರಾಜ್ಯ ಪ್ರಶಸ್ತಿಗೆ ಪ್ರಸ್ತಾವನೆಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಹಿರಿಯ ನಾಗರೀಕರು ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ (ಶಿಕ್ಷಣ, ಸಾಹಿತ್ಯ, ಕಲೆ, ಕಾನೂನು, ಪ್ರತಿಭೆ/ಕ್ರೀಡೆ ಹಾಗೂ ಹಿರಿಯ ನಾಗರೀಕರ ಕ್ಷೇತ್ರದಲ್ಲಿ ಸಮಾಜ ಸೇವೆಯನ್ನು ಒಳಗೊಂಡಂತೆ) 6 ವೈಯಕ್ತಿಕ ರಾಜ್ಯ ಪ್ರಶಸ್ತಿಗಳನ್ನು ಹಾಗೂ ಹಿರಿಯ ನಾಗರೀಕರ ಕ್ಷೇತ್ರದಲ್ಲಿ ಉತ್ತಮ ಕಾರ್ಯನಿರ್ವಹಿಸುತ್ತಿರುವ 1 ಸಂಸ್ಥೆಗೆ ರಾಜ್ಯ ಪ್ರಶಸ್ತಿ ಒಟ್ಟು 07 ಪ್ರಶಸ್ತಿಗಳನ್ನು ನೀಡಲು ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಅರ್ಜಿ ನಮೂನೆ ಪಡೆಯಲು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಮಾವಿನ ಕೆರೆ ಆಜಾದ ನಗರ, ರಾಯಚೂರು ದೂರವಾಣಿ ಸಂಖ್ಯೆ:–08532–200992 ರನ್ನು ಕಚೇರಿ ಕೆಲಸದ ವೇಳೆಯಲ್ಲಿ ಸಂಪರ್ಕಿಸಿ, ಆಗಸ್ಟ್ 25ರೊಳಗಾಗಿ ಸಲ್ಲಿಸಬಹುದಾಗಿದೆ.

ತಡವಾಗಿ ಬಂದಂತಹ ಪ್ರಸ್ತಾವನೆಗಳ ಪರಿಗಣಿಸುವುದಿಲ್ಲ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಖಂಡ ಬಳ್ಳಾರಿ ಜಿಲ್ಲೆಗೊಬ್ಬರೇ ಬಿ.ನಾಗೇಂದ್ರ



**ಬಳ್ಳಾರಿ:ಅ,3–** ಅಖಂಡ ಬಳ್ಳಾರಿ ಜಿಲ್ಲೆಗೆ ಗ್ರಾಮೀಣ ಕ್ಷೇತ್ರದ ಶಾಸಕ ಬಿ.ನಾಗೇಂದ್ರ ಅವರು ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರ ಸಂಪುಟದಲ್ಲಿ ಸಚಿವರಾಗಿ ಇಂದು ಸಂಜೆ ಪ್ರಮಾಣವಚನ ಸ್ವೀಕರಿಸಲಿದ್ದಾರೆ.

ಅಂಖಂಡ ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ವಿಧಾನಸಭಾ ಕ್ಷೇತ್ರದಿಂದ ಎರೆಡು ಬಾರಿ ಬಿಜೆಪಿ ನಂತರ ಪಕ್ಷೇತರ ಶಾಸಕರಾಗಿ, ನಂತರ 2018 ಮತ್ತು 2023 ರಲ್ಲಿ ಬಳ್ಳಾರಿ ಗ್ರಾಮೀಣ ಕ್ಷೇತ್ರದಿಂದ ಕಾಂಗ್ರೆಸ್ ಶಾಸಕರಾಗಿ ಪ್ರಬಲ ಬಿಜೆಪಿ ನಾಯಕ ಬಿ.ಶ್ರೀರಾಮುಲು ಅವರನ್ನು ಸೋಲಿಸಿ. ಸಿದ್ದರಾಮಯ್ಯ ಅವರ ಸಂಪುಟದಲ್ಲಿ ಯುವಜನಸೇವೆ ಮತ್ತು ಕ್ರೀಡಾ, ಇಲಾಖೆ ಜೊತೆಗೆ ಎಸ್ಟಿ ಇಲಾಖೆಯ ಸಚಿವರಾಗಿ ಒಂದು ವರ್ಷ ಇದ್ದರು. ಅಷ್ಟರಲ್ಲಿ ವಾಲ್ಮೀಕಿ ಅಭಿವೃದ್ಧಿ ನಿಗಮದಲ್ಲಿ ನಡೆದ ಹಣ ದುರ್ಬಳಕೆ ಪ್ರಕರಣದ ಆರೋಪದಿಂದ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಸಿಐಡಿ ತನಿಖೆ ನಡೆದು ಇವರ ಪಾತ್ರ ಇಲ್ಲ ಎಂದು ಹೇಳಿದ ಮೇಲೆ ಸಚಿವ ಸಂಪುಟಕ್ಕೆ ತೆಗೆದುಕೊಳ್ಳವುದಾಗಿ ಸಿದ್ದರಾಮಯ್ಯ ಹೇಳುತ್ತಿದ್ದರಾದರೂ ಆಗಿರಲಿಲ್ಲ.

ಆದರೆ ಡಿ.ಕೆ.ಶಿವಕುಮಾರ್ ಅವರ ಇಂದಿನ ಸಚಿವ ಸಂಪುಟ ವಿಸ್ತರಣೆಯಲ್ಲಿ ಸಚಿವರಾಗಿ ಮತ್ತೊಮ್ಮೆ ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.

ಜಿಲ್ಲೆಯಿಂದ ನಾಗೇಂದ್ರ ಅಣ್ಣ ಸಚಿವರಾಗಲಿ ಎಂದೆ ಹೇಳುತ್ತ ಬಂದವರು ಬರು ಬರುತ್ತಾ ತಮಗೇ ಸಚಿವ ಸ್ಥಾನ ಬೇಕೆಂದು ನಡೆಸಿದ ಪ್ರಯತ್ನ ವಿಫಲವಾಗಿದೆ.

ಕೂಡ್ಲಿಗಿ ಶಾಸಕರಾಗುವ ಮುನ್ನ ನಾಗೇಂದ್ರ ಅವರು ಯುವ ಕಾಂಗ್ರೆಸ್ ನಲ್ಲಿದ್ದು ಮಾಜಿ ಸಚಿವ ಎಂ.ದಿವಾಕರ ಬಾಬು ಅವರ ಬೆಂವಲಿಗರಾಗಿದ್ದರು. ಆದರೆ ಕೇಬಲ್ ಗಲಾಟೆಯಿಂದಾಗಿ ಅವರಿಂದ ದೂರವಾಗಿ ರೆಡ್ಡಿ. ಶ್ರಿರಾಮುಲು ಗುಂಪು ಸೇರಿದ್ದರು.

ಅಕ್ರಮ ಗಣಿ ಸಾಗಾಟದ ಆರೋಪದ ಮೇಲೆ ಸಿಬಿಐನಿಂದ ಬಂಧನರಾಗಿ ಬಿಡುಗಡೆಯಾದಮೇಲೆ ಸಚಿವ ಸಂತೋಷ್ ಲಾಡ್ ಅವರಿಂದಾಗಿ ರಾಹುಲ್ ಗಾಂಧಿ ಸಮ್ಮುಖದಲ್ಲಿ ಹೊಸಪೇಟೆಯಲ್ಲಿ ನಡೆದ ಸಮಾವೇಶದಲ್ಲಿ ಕಾಂಗ್ರೆಸ್ ಸೇರಿದ್ದರು.

ನಾಗೇಂದ್ರ ಅವರು ಸಚಿವರಾಗಿದ್ದರಿಂದ ಅವರ ಅಭಿಮಾನಿಗಳಲ್ಲಿ ಸಂತಸದ ಎಲ್ಲೆ ಮೀರಿದೆ.

ಸಚಿವ ಸ್ಥಾನ ಕಳೆದುಕೊಂಡ ಮೇಲೆ ಕ್ಷೇತ್ರದಿಂದ ದೂರವಾಗಿದ್ದ ಅವರು ಕಳೆದ ಲೋಕಸಭಾ ಚುನಾವಣೆಯಲ್ಲಿ ಟೊಂಕ ಕಟ್ಟಿ ನಿಂತು ತುಕರಾಂ ಅವರ ಗೆಲುವಿಗೆ ಶ್ರಮಿಸಿದ್ದರು. ಅದು ಇಂದು ಫಲನೀಡಿದೆ.ಕ್ಷೇತ್ರದ ಜನತೆಗೆ ಮತ್ತೆ ಸಚಿವರಾಗಿ ಬರುವೆ ಎಂದು ಹೇಳಿದ್ದು ಇಂದು ಕೈಗೂಡಿದೆ.

# ಕರಾಟೆಯಲ್ಲಿ ಮನೋಹರ ಬೀರನೂರ ವಿದ್ಯಾರ್ಥಿಗಳ ಸಾಧನೆ



**ಕಲಬುರಗಿ:** 29ನೇ ಆಲ್ ಇಂಡಿಯಾ ರಾಷ್ಟಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಅಂತರಾಷ್ಟೀಯ ಕರಾಟೆ ಪಟು ಮನೋಹರ್ ಕುಮಾರ್ ಬೀರನೂರ ರವರ ವಿದ್ಯಾರ್ಥಿಗಳು ಸಾಧನೆ ಮಾಡಿದ್ದಾರೆ ಎಂದು ಅವರು ತಿಳಿಸಿದ್ದಾರೆ.

ಜುಲೈ 25 ಮತ್ತು 26ರಂದು ಮೈಸೂರಿನ ಚಾಮುಂಡಿ ವಿಹಾರ ಒಳ ಕ್ರೀಡಾಂಗಣದಲ್ಲಿ ನಡೆದ 29ನೇ ಆಲ್ ಇಂಡಿಯಾ ರಾಷ್ಟ ಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ ಉಪಾಧ್ಯಕ್ಷರು (ರಾಜ್ಯ ಸಚಿವ ದರ್ಜೆ) ಕರ್ನಾಟಕ ಸರ್ಕಾರ ಕ್ರೀಡಾ ಪ್ರಾಧಿಕಾರ ಬೆಂಗಳೂರು, ಮಾಜಿ ವಿಧಾನ ಪರಿಷತ್ ಸದಸ್ಯರು, ಅಧ್ಯಕ್ಷರು AISKU ªÀÄAvÀÄÛAKSKA ರವರ ನೇತೃತ್ವದಲ್ಲಿ AKSKA ಸಂಸ್ಥೆಯ ಸ್ಪೋರ್ಟ್ಸ್ ಕಮಿಷನ್ ಚೇರ್ಮನ್ ಮತ್ತು ಅಂತರಾಷ್ಟೀಯ ಕರಾಟೆ ಪಟು ಮನೋಹರ ಬೀರನೂರ ರವರ ಕರಾಟೆ ಪಟುಗಳು ಪಂದ್ಯಾವಳಿಯಲ್ಲಿ ಭಾಗವಹಿಸಿ 4 ಬಂಗಾರ , 5ಬೆಳ್ಳಿ, ಮತ್ತು 12ಕಂಚು ಸೇರಿ ಒಟ್ಟು 21 ಪದಕ ಪ್ರಶಸ್ತಿ ಪತ್ರ ಗಳನ್ನು ಪಡೆದು ರಾಜ್ಯಕೆ, ಕಲ್ಯಾಣ ಕರ್ನಾಟಕ ಭಾಗಕ್ಕೆ ಮತು ಕಲಬುರಗಿ ಜಿಲ್ಲೆಗೆ ಕೀರ್ತಿ ತಂದಿರುತ್ತಾರೆ. ಈ ಸಾಧನೆಗೆ ಅಧಿಕಾರಿಗಳ ವರ್ಗ, ರಾಜಕೀಯ ಮುಖಂಡರು ಕ್ರೀಡಾ ಅಭಿಮಾನಿಗಳು ಮತ್ತು ಸಂಸ್ಥೆಯ ಪದಾಧಿಕಾರಿಗಳಾದ ಹರ್ಷ ವ್ಯಕ್ತಪಡಿಸಿದ್ದಾರೆ ಎಂದು ಸಂಸ್ಥೆಯ ಪದಾಧಿಕಾರಿಗಳಾದ ಮಂಜುನಾಥ ನಾಲವಾರಕರ್, ಅಭಯ್ ಚವ್ಹಾಣ ಮತ್ತು ಶರಣ ರೆಡ್ಡಿ ಅವರು ಪತ್ರಿಕಾ ಪ್ರಕಟಣೆ ಮೂಲಕ ಹರ್ಷ ವ್ಯಕ್ತಪಡಿಸಿದ್ದಾರೆ. Maps

ಪದಕ ಪಡೆದ ವಿದ್ಯಾರ್ಥಿಗಳ ವಿವರ

ಸಹನಾ ಕೋಳಕುರ(1 ಕಂಚು),ಶ್ರೇಷ್ಠ ಬೀರನೂರ(ಕಂಚು) ಆರವ (1ಬೆಳ್ಳಿ,1ಕಂಚು),ಅಭಿಷೇಕ (2ಬಂಗಾರ), ಹರ್ಷಿತ್ (2 ಬೆಳ್ಳಿ) ಪ್ರಣವ(1ಬಂಗಾರ 1 ಕಂಚು),ಮಿತಾಕ್ಷಿ (1ಕಂಚು) ಇಜಯ ರಾಜ(1ಕಂಚು),ಶ್ರೀಶೈಲ(1ಬಂಗಾರ.1ಬೆಳ್ಳಿ), ದೇವಾಂಕ(1ಬೆಳ್ಳಿ),ಸಂಜಯ್ ಎನ(1ಕಂಚು), ಭೀಮಾಶಂಕರ(1 ಕಂಚು),ಶ್ರೀದೇವಿ ಬಿ.(1 ಕಂಚು)

ತನುಶ್ರೀ(1 ಕಂಚು),ಸಾನವಿಕ.ಎನ್(1 ಕಂಚು)

ಸುದ್ದಿ ಮತ್ತು
ಜಾಹೀರಾತಿಗಾಗಿ
ಸಂಪರ್ಕಿಸಿ
6360866626

# ಕಮತಾಣಾದಲ್ಲಿ ಕಾಂಗ್ರೆಸ್ ಸಂಘಟನೆ ಸೃಜನ ಅಭಿಯಾನ

**ಬೀದರ್ :**ದಕ್ಷಿಣ ಕ್ಷೇತ್ರದ ಕಮತಾಣ ಗ್ರಾಮದ ಹೊರವಲಯದ ಎಮ್ ಆರ್ ಫಂಕ್ಷನ್ ಹಾಲ್ ನಲ್ಲಿ ರವಿವಾರ ಕಾಂಗ್ರೆಸ್ ಪಕ್ಷದ ಸಂಘಟನೆ ಸೃಜನ ಅಭಿಯಾನದಲ್ಲಿ ಎಐಸಿಸಿ ವೀಕ್ಷಕರಾದ ರಾಜೇಶ್ ಲಿಲೋತಿಯಾ ಹಾಗು ಬೀದರ ದಕ್ಷಿಣ ಕ್ಷೇತ್ರದ ಮಾಜಿ ಶಾಸಕರಾದ ಅಶೋಕ್ ಖೇಣಿ ಸೇರಿ ಸಸಿಗೆ ನೀರೆರುವ ಮೂಲಕ ಉದ್ಘಟಿಸಿ ಕಾರ್ಯಕರ್ತರೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, "ಕಾಂಗ್ರೆಸ್ ಪಕ್ಷದಲ್ಲಿ ಸಾಮಾನ್ಯ ಕಾರ್ಯಕರ್ತರ ಅಭಿಪ್ರಾಯಕ್ಕೂ ಮಹತ್ವದ ಸ್ಥಾನವಿದ್ದು, ಸಂಘಟನಾ ಸೃಜನ ಅಭಿಯಾನದ ಮೂಲಕ ತಳಮಟ್ಟದ ಕಾರ್ಯಕರ್ತರ ಅಭಿಪ್ರಾಯ, ಸಲಹೆ ಹಾಗೂ ಸಂಘಟನಾ ಸಾಮರ್ಥ್ಯವನ್ನು ಅರಿತು ಪಕ್ಷವನ್ನು ಇನ್ನಷ್ಟು ಬಲಪಡಿಸಲಾಗುವುದು" ಎಂದು ರಾಜೇಶ ಲಿಲೋತಿಯಾ ಹೇಳಿದರು

ಮಾನ್ಯ ಅಶೋಕ್ ಖೇಣಿ ಮಾತಾನಾಡಿ ಎಲ್ಲರೂ ಒಗ್ಗಾಟಾಗಿ ಪಕ್ಷ ಸಂಘಟನೆ ಮಾಡೋಣ ಕಳೆದ ಚುನಾವಣೆಯಲ್ಲಿ ಅಲ್ಪ ಮತಗಳಿಂದ ಸೋತಿರಬಹುದು ಆದರೆ ನಾನು ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮ ಪಡುತ್ತೀದೆನೆ ಮುಂದಿನ ವಿಧಾನಸಭಾ ಚುಣಾವಣೆಯಲ್ಲಿ ಬೀದರ ಜಿಲ್ಲೆಯೆ ಆರು ವಿಧಾನಸಭಾ ಕ್ಷೇತ್ರದಲ್ಲಿ ನಮ್ಮ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವಿಗಾಗಿ ಶ್ರಮಿಸೋಣ ಎಂದು ಹೇಳಿದರು.

ಈ ಸಂಧರ್ಭದಲ್ಲಿ ಜಿಲ್ಲಾ ಅಧ್ಯಕ್ಷರಾದ ಬಸವರಾಜ್ ಜಾಬಶಟ್ಟಿ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಯಾದ ಮೀನಾಕ್ಷಿ ಸಂಗ್ರಾಮ್, ಬ್ಲಾಕ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರ ಚಂದ್ರಶೇಖರ ಚನಶಟ್ಟಿ, ಲೇಬರ್ ಸೇಲ್ ಜಿಲ್ಲಾ ಅಧ್ಯಕ್ಷ ರಮೇಶ ಹೌದಖಾನಿ,

ಪ್ರಧಾನ ಕಾರ್ಯದರ್ಶಿ ದತ್ತಾತ್ರಿ ಮುಲಗೆ, ಸಮಿಯೋದ್ದಿನ್, ವಿರಶೈವ ನಿಗಮದ




ನಿರ್ದೇಶಕ ರಾಜಕುಮಾರ್ ತರಿ, ಮುಖಂಡರಾದ ತನ್ವೀರ ಅಹ್ಮದ ಖಾನ್, ಮನ್ನನ್ ಸೇಟ್, ಸುನೀಲ ಖಾಶೆಂಪೂರ, ಅಬ್ದುಲ್ ಸತ್ತರ, ಗೊವರ್ಧನ ರಾಠೋಡ್,ವಿನೋದ ಅಪ್ಪೆ, ಸಂತೋಷ ಪಾಟೀಲ್, ಸಾಜೀದ ಪಾಶಾ, ಬಾಬುರಾವ ತುಂಬಾ, ಲೋಕೆಶ ಮಂಗಲಗಿ, ಸಚಿನ ಮಲ್ಕಾಪೂರ, ಪ್ರಕಾಶ ರಡ್ಡಿ, ಖಾಲೇದ್, ಖಮರ್,ಅಜ್ಮತ್ ,ಗೋರೆಮಿಯ್ಯಾ, ಪ್ರಶಾಂತ್ ಜೈನ್, ಪರ್ವೆಜ್, ವಿಶಾಲ ಹೊನ್ನಾ,ಬಾಬುರಾವ , ಲೋಕೇಶ್ ಕನಶಟ್ಟಿ ಸೇರಿದಂತೆ ಪಕ್ಷದ ಹಿರಿಯ ಮುಖಂಡರು, ಬ್ಲಾಕ್ ಕಾಂಗ್ರೆಸ್ ಪದಾಧಿಕಾರಿಗಳು, ಗ್ರಾಮ ಮಟ್ಟದ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಪ್ರೊ. ರಾಜನಾಳ್ಕರ್ ಲಕ್ಷ್ಮಣ ಅವರು ಬೋಧನಾ ವೃತ್ತಿ ಪರಂಪರೆಯಶ್ರೇಷ್ಠತೆ ಹೆಚ್ಚಿಸಿದ್ದಾರೆ



**ಕಲಬುರಗಿ:ಆ.3:** ಪರಿಪೂರ್ಣ ವ್ಯಕ್ತಿತ್ವದೊಂದಿಗೆ ಬೋಧನಾ ವೃತ್ತಿ ಪರಂಪರೆಯ ಶ್ರೇಷ್ಠತೆಯನ್ನು ಪ್ರೊ. ರಾಜನಾಳ್ಕರ್ ಲಕ್ಷ್ಮಣ ಹೆಚ್ಚಿಸಿ ವಾಣಿಜ್ಯ ಮತ್ತು ವ್ಯವಹಾರ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಇವರ ಜ್ಞಾನ, ಅನುಭವ ಮತ್ತು ಸರಳತೆಯ ಗುಣಗಳನ್ನು ವಿದ್ಯಾರ್ಥಿ ಸಮುದಾಯ ಅನುಸರಿಸಬೇಕು ಎಂದು ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿ ಪ್ರೋ. ಶಶಿಕಾಂತ್ ಎಸ್. ಉಡಿಕೇರಿ ಅಭಿಪ್ರಾಯಪಟ್ಟರು.

ಗುಲಬರ್ಗಾ ವಿಶ್ವವಿದ್ಯಾಲಯದ ಮಹಾತ್ಮಗಾಂಧಿ ಸಭಾಂಗಣದಲ್ಲಿ ಆಯೋಜಿಸಿದ ವಾಣಿಜ್ಯ ಮತ್ತು ನಿರ್ವಹಣ ನಿಕಾಯದ ಡೀನ್, ವಾಣಿಜ್ಯ ಮತ್ತು ನಿರ್ವಹಣಾ ವಿಭಾಗದ ಮುಖ್ಯಸ್ಥ ಪ್ರೋ. ರಾಜನಾಳ್ಕರ್ ಲಕ್ಷ್ಮಣ ಅವರ ವಯೋನಿವೃತ್ತಿ ಅಭಿನಂದನಾ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದರು.

ಸುಮಾರು ನಾಲ್ಕು ದಶಕಗಳಿಂದ ವಿಶ್ವವಿದ್ಯಾಲಯದ ಶೈಕ್ಷಣಿಕ ಬೆಳವಣಿಗೆಗೆ ಶ್ರಮಿಸಿ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಕರಾಗಿ ಗುರುತಿಸಿಕೊಂಡಿದ್ದಾರೆ. ಬಡತನದ ಕುಟುಂಬದಲ್ಲಿ ಬೆಳೆದು ಕಠಿಣ ಪರಿಶ್ರಮದಿಂದ ಸಾಧನೆ ಮಾಡಿದ್ದಾರೆ. ವಿಶ್ವವಿದ್ಯಾಲಯದ ಉನ್ನತ ಹುದ್ದೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ. 26 ವಿದ್ಯಾರ್ಥಿಗಳಿಗೆ ಪಿಎಚ್.ಡಿ ಮತ್ತು 17 ವಿದ್ಯಾರ್ಥಿಗಳಿಗೆ ಎಂ.ಫಿಲ್ ಪದವಿಗೆ ಮಾರ್ಗದರ್ಶನ ಮಾಡಿದ್ದಾರೆ. ಯುಜಿಸಿ ಹಲವು ಯೋಜನೆಗಳನ್ನು ಪೂರೈಸಿ ದಕ್ಷಿಣ ಬಾರತದ ವಾಣಿಜ್ಯ, ವ್ಯವಹಾರ ಮತ್ತು ನಿರ್ವಹಣಾ ಕ್ಷೇತ್ರದ ವಿದ್ವಾಂಸರಾಗಿ ವಿಶ್ವವಿದ್ಯಾಲಯದ ಗೌರವ ಹೆಚ್ಚಿಸಿದ್ದಾರೆ. ಕುಲಪತಿ, ಕುಲಸಚಿವ, ವಿತ್ತಾಧಿಕಾರಿ, ಸಿಂಡಿಕೇಟ್, ವಿದ್ಯಾ ವಿಷಯಕ ಪರಿಷತ್ ಸದಸ್ಯರಾಗಿ, ವಿವಿಧ ಸಮಿತಿಗಳ ಸದಸ್ಯರಾಗಿ ನೇಮಕಗೊಂಡು ವಿಶ್ವವಿದ್ಯಾಲಯದ ಏಳಿಗೆ ಮತ್ತು ವಿದ್ಯಾರ್ಥಿಗಳ ಬೆಳವಣಿಗೆಗೆ ಪೂರಕ ನಿರ್ಣಯ ಕೈಗೊಂಡು ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಮೆಚ್ಚುಗೆ ಪಡೆದಿರುವುದು ಹೆಮ್ಮೆಯ ಸಂಗತಿ. ಇವರ ಸರಳತೆ, ವ್ಯಕ್ತಿತ್ವ ಮತ್ತು ಮಾನವೀಯ ಗುಣಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ದಾವಣಗೆರೆ ವಿಶ್ವವಿದ್ಯಾಲಯದ ವಾಣಿಜ್ಯ ಅಧ್ಯಯನ ವಿಭಾಗದ ವಿಶ್ರಾಂತ ಡೀನ್ ಹಾಗೂ ಪ್ರಾಧ್ಯಾಪಕ ಡಾ. ಜಿ.ಟಿ. ಗೋವಿಂದಪ್ಪ ಮಾತನಾಡಿ ಪ್ರೊ. ರಾಜನಾಳ್ಕರ್ ಲಕ್ಷ್ಮಣ ಶಾಂತಿ ಸ್ವಭಾವ ಮತ್ತು ಸ್ನೇಹಜೀವಿಯಾಗಿದ್ದಾರೆ. ಸಹೋದ್ಯೋಗಿಗಳ ಜೊತೆಗೆ ಅತ್ಯಂತ ಗೌರವ ಭಾವನೆ ಬೆಳೆಸಿಕೊಂಡಿದ್ದ ಪ್ರೊ. ರಾಜನಾಳ್ಕರ್ ಲಕ್ಷ್ಮಣ ಅವರು ವಿದ್ಯಾರ್ಥಿಗಳ ಬಗ್ಗೆ ಅತೀವ ಪ್ರೀತಿ, ಕಾಳಜಿಯಿತ್ತು. ಆಡಳಿತದಲ್ಲಿ ಅತ್ಯುತ್ತಮ ಅನುಭವ ಹೊಂದಿದ್ದ ವಾಣಿಜ್ಯ ವಿಭಾಗವನ್ನು ಮಾದರಿ ವಿಭಾಗವಾಗಿ ಕಟ್ಟಿದ್ದಾರೆ. ಸ್ವಂತ ಕಟ್ಟಡ, ಆಧುನಿಕ ಕೊಠಡಿಗಳು, ಸ್ಮಾರ್ಟ್ ಕ್ಲಾಸ್ ರೂಂಗಳನ್ನು ನಿರ್ಮಿಸಿ ವಿದ್ಯಾರ್ಥಿಗಳ ಕಲಿಕೆಗೆ ಪ್ರೋತ್ಸಾಹ ನೀಡಿದ್ದಾರೆ ಎಂದರು.

ಕುಲಸಚಿವ ಪ್ರೋ. ರಮೇಶ ಲಂಡನಕರ್ ಅಧ್ಯಕ್ಷತೆ ವಹಿಸಿ ಮಾತನಾಡಿ ಕುಗ್ರಾಮದಲ್ಲಿ ಹುಟ್ಟಿ ಬೆಳೆದಿರುವ ಪ್ರೊ. ರಾಜನಾಳ್ಕರ್ ಲಕ್ಷ್ಮಣ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯನ್ನು ನಿಬಾಯಿಸಿ ನ್ಯಾಯ ಒದಗಿಸಿದ್ದಾರೆ. ವಿಶ್ವವಿದ್ಯಾಲಯ ಬೆಳವಣಿಗೆ ಬಗ್ಗೆ ತುಡಿತವಿತ್ತು. ವಿವಿಧ ಸಮಿತಿಗಳಲ್ಲಿ ಜವಾಬ್ದಾರಿಯುತ ನಿರ್ಣಯಗಳನ್ನು ಕೈಗೊಂಡು ಅಧಿಕಾರಿಗಳ ಮೆಚ್ಚುಗೆ ಪಡೆದಿದ್ದಾರೆ. ಇವರ ಜ್ಞಾನ ಪಾಂಡಿತ್ಯ, ಸಹೃದಯತೆ, ಕಾಳಜಿ ಮತ್ತು ತಾಳ್ಮೆ ನಮಗೆಲ್ಲ ಮಾದರಿ. ಪ್ರೊ. ರಾಜನಾಳ್ಕರ್ ಲಕ್ಷ್ಮಣ ಅತ್ಯುತ್ತಮ ತತ್ವಜ್ಞಾನಿ ಎಂದರು.

ವಾಣಿಜ್ಯ ವಿಬಾಗದ ನಿವೃತ್ತ ಪ್ರಾಧ್ಯಾಪಕ ಪ್ರೋ ಎ.ಪಿ. ಹೊಸಮನಿ ಅತಿಥಿ ಗಣ್ಯರನ್ನು ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿ ವಿಭಾಗದ ಬೆಳವಣಿಗೆ ಮತ್ತು ಪ್ರೊ. ರಾಜನಾಳ್ಕರ್ ಲಕ್ಷ್ಮಣ ಅವರೊಂದಿಗಿನ ಒಡನಾಟದ ಕ್ಷಣಗಳನ್ನು ಸ್ಮರಿಸಿಕೊಂಡರು. ಮೌಲ್ಯಮಾಪನ ಕುಲಸಚಿವ ಡಾ. ಎನ್.ಜಿ. ಕಣ್ಣೂರ, ಪ್ರೊ. ಸಿ. ಸುಲೋಚನಾ, ಪ್ರೊ. ಸಿ. ಬಸವರಾಜು, ಪ್ರೊ. ಎ.ಪಿ. ಹೊಸಮನಿ, ಪ್ರೊ. ಬಿ. ವಿಜಯಾ, ಪ್ರೊ. ಬಿ.ಎಂ. ಕನ್ನಳ್ಳಿ ಮಾತನಾಡಿದರು. ಕು. ವಿಜಯಲಕ್ಷ್ಮಿ, ಡಾ. ಅನುಥಾಮಸ್, ಡಾ. ವಿಜಯ ಅನಿಸಿಕೆ ಹಂಚಿಕೊಂಡರು. ಅಪರ್ಣ ಅತಿಥಿ ಪರಿಚಯಿಸಿದರು. ಕೊನೆಯಲ್ಲಿ ಡಾ. ರಾಜನಾಳ್ಕರ್ ಲಕ್ಷ್ಮಣ ಅವರ ಕುರಿತ ಕಿರುಚಿತ್ರ ಪ್ರದರ್ಶಿಸಲಾಯಿತು. ಸಂಗೀತಾ ವಿಭಾಗದ ಡಾ. ಲಕ್ಷ್ಮಿಶಂಕರ್ ಜೋಷಿ, ಡಾ. ಜಯದಾನಮ್ಮ ಹಾಗೂ ಸಂಗಡಿಗರು ಪ್ರಾರ್ಥನೆ ಮತ್ತು ನಾಡಗೀತ ಪ್ರಸ್ತುತಪಡಿಸಿದರು. ಡಾ. ನಿವೇದಿತಾ ವಂದಿಸಿದರು.

ವಿದ್ಯಾರ್ಥಿಗಳ ಪ್ರೀತಿ ಮತ್ತು ವಿಶ್ವಾಸವೇ ನನ್ನ ದೊಡ್ಡ ಆಸ್ತಿ. ಸಹೋದ್ಯೋಗಿಗಳ ಬಾಂದವ್ಯ ನನಗೆ ಸಾಕಷ್ಟು ಕಲಿಸಿದೆ. ಕುಗ್ರಾಮವೊಂದರಲ್ಲಿ ತಳಮಟ್ಟದ ಕುಟುಂಬದಲ್ಲಿ ಹುಟ್ಟಿ ಬೆಳೆದು ಸೋದರ ಮಾವ ಶಿವಕುಮಾರ್ ಮತ್ತು ನನ್ನ ಕುಟುಂಭದ ಸದಸ್ಯರ ಪ್ರೋತ್ಸಾಹ ನನನ್ನು ಎತ್ತರಕ್ಕೆ ಬೆಳೆಸಿದೆ. ಡಾ. ಪ್ರಭಾಕರ್ ಮತ್ತು ಡಾ. ಬೋಗಪ್ಪ ಅವರ ಮಾರ್ಗದರ್ಶನ ವಿಶ್ವವಿದ್ಯಾಲಯದ ಮಟ್ಟಕ್ಕೆ ತಂದು ನಿಲ್ಲಿಸದೆ. ವಿಶ್ವವಿದ್ಯಾಲಯ ನನಗೆ ಹೆಚ್ಚು ಅವಕಾಶ ನೀಡಿ ಬೆಳೆಸಿದೆ. ವಿಶ್ವವಿದ್ಯಾಲಯಕ್ಕೆ ಸದಾ ಚಿರ್ರುಋಣಿಯಾಗಿರುವೆ.

ಪ್ರೊ. ರಾಜನಾಳ್ಕರ್ ಲಕ್ಷ್ಮಣ

ಪ್ರಾಧ್ಯಾಪಕರು

ವಾಣಿಜ್ಯ ವಿಭಾಗದಲ್ಲಿ ಸುಮಾರು ನಲವತ್ತು ವರ್ಷಗಳ ಸೇವೆ ಸಲ್ಲಿಸಿರುವ ಪ್ರೊ. ರಾಜನಾಳ್ಕರ್ ಲಕ್ಷ್ಮಣ ಅವರ ಹೆಸರಿನಲ್ಲಿ ಅಧ್ಯಯನ ಪೀಠ ಸ್ಥಾಪಿಸಿ ಅದರ ಅಧ್ಯಕ್ಷರಾಗಿ ನೇಮಿಸಿದರೆ ಈ ಭಾಗದ ವಾಣಿಜ್ಯ ವಿದ್ಯಾರ್ಥಿಗಳಿಗೆ ಅವರ ಜ್ಞಾನ, ಅನುಭವ, ಸಂಶೋಧನೆ, ಬೊಧನೆ ಮತ್ತು ವೃತ್ತಿ ವೈಶಿಷ್ಟ್ಯಗಳ ಉಪಯೋಗ ಸಿಗಲಿದೆ. ಕಲ್ಯಾಣ ಕರ್ನಾಟಕ ಭಾಗದ ವಿದ್ಯಾರ್ಥಿಗಳು, ಉಪನ್ಯಾಸಕರು, ಹಳೆಯ ವಿದ್ಯಾರ್ಥಿಗಳು, ವಾಣಿಜ್ಯ ಮತ್ತು ವ್ಯವಹಾರ ವೃತ್ತಿ ನಿರತರು ಇವರ ಜ್ಞಾನ ಪಡೆಯಲು ಸಾಧ್ಯವಾಗಲಿದೆ. ವಿದ್ಯಾರ್ಥಿ ವೇತನ ನೀಡುವ ಮೂಲಕ ವಿದ್ಯಾರ್ಥಿಗಳನ್ನು ವಾಣಿಜ್ಯ, ವ್ಯವಹಾರ ಮತ್ತು ನಿರ್ವಹಣಾ ಕ್ಷೇತ್ರಗಳ ಕಡೆಗೆ ಪ್ರೋತ್ಸಾಹಿಸಬೇಕಿದೆ. ಪ್ರೊ. ರಾಜನಾಳ್ಕರ್ ಲಕ್ಷ್ಮಣ ಅವರ ಉತ್ಕೃಷ್ಠ ಸಂಶೊಧನಾ ಜ್ಞಾನ ಮತ್ತು ಅನುಭವಗಳಿಂದ ಈ ಬಾಗದ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿಕೊಳ್ಳಲು ಸಾಧ್ಯವಾಗುತ್ತದೆ.

–ಪ್ರೊ. ಶಶಿಕಾಂತ್ ಎಸ್. ಉಡಿಕೇರಿ

ಕುಲಪತಿ

# ಅಕ್ರಮ ಅಕ್ಕಿ ಸಾಗಣೆ: 34.30 ಕ್ವಿಂಟಲ್ ಅಕ್ಕಿ ಜಪ್ತಿ



**ಅಫಜಲಪುರ:ಆ.3:** ಸರ್ಕಾರದಿಂದ ಹಂಚಿಕೆಯಾದ ಅಕ್ಕಿಯನ್ನು ಕಡಿಮೆ ಬೆಲೆಯಲ್ಲಿ ಖರೀದಿಸಿ ಅವುಗಳನ್ನು ಸಂಗ್ರಹಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡಬೇಕೆಂದು ಮಹಾರಾಷ್ಟದ ಧುದನಿಗೆ ತೆಗೆದುಕೊಂಡು ಹೋಗುತ್ತಿರುವಾಗ ಖಚಿತ ಮಾಹಿತಿ ಮೇರೆಗೆ ಆಹಾರ ನಿರೀಕ್ಷಕರಾದ ಮಹ್ಮದ್ ಶೋಹೇಬ್ ದಾಳಿ ನಡೆಸಿ ಅಕ್ರಮ ಅಕ್ಕಿ ವಶಕ್ಕೆ ತೆಗೆದುಕೊಂಡಿದ್ದಾರೆ.

ಅಫಜಲಪುರ ತಾಲೂಕಿನ ದೇವಲ ಗಾಣಗಾಪುರ–ಚವಡಾಪುರ ಮಾರ್ಗವಾಗಿ ಮಹಾರಾಷ್ಟ ರಾಜ್ಯಕ್ಕೆ ಅಕ್ರಮ ಅಕ್ಕಿ ಸಾಗಿಸುತ್ತಿರುವ ಕುರಿತು ಮಾಹಿತಿ ಮೇರೆಗೆ ಅಫಜಲಪುರ ತಹಶೀಲ್ದಾರ್ ಸಂಜೀವಕುಮಾರ ದಾಸರ ಆದೇಶದ ಮೇರೆಗೆ ಆಹಾರ ನಿರೀಕ್ಷಕರು ದೇವಲ ಗಾಣಗಾಪುರ –ಚವಡಾಪುರ ಮುಖ್ಯ ರಸ್ತೆಗೆ ಹೊಂದಿಕೊಂಡಿರುವ ಹೊಸ ರಾಜ್ಯ ಹೆದ್ದಾರಿಯ ಬಳಿ ಕ್ರೂಜರ್ ವಾಹನ ಬರುವಾಗ ತಡೆದು ನಿಲ್ಲಿಸಿ ಪರಿಶೀಲನೆ ನಡೆಸಿದಾಗ ವಾಹನದಲ್ಲಿ 34.30 ಕ್ವಿಂಟಲ್ ಅಕ್ಕಿ ಅಂದಾಜು 48,250 ರೂ.ಮೌಲ್ಯದ್ದಾಗಿದೆ. ಅಕ್ಕಿಯನ್ನು ಕಾಳಸಂತೆಯಲ್ಲಿ ಮಾರಟ ಮಾಡಲು ಮಹಾರಾಷ್ಟಕ್ಕೆ ಸಾಗಣೆ ಮಾಡಲಾಗುತ್ತಿತ್ತು ಎಂದು ತಿಳಿದು ಬಂದಿದೆ.ಹೀಗಾಗಿ ಹೇರೂರ (ಬಿ) ಗ್ರಾಮದ ಹುಲಕಂತರಾಯ ಸಾಲೂಂಕೆ ವಿರುದ್ಧ ದೇವಲ ಗಾಣಗಾಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾರ್ಯಾಚರಣೆಯಲ್ಲಿ ಪೊಲಿಸ್ ಸಿಬ್ಬಂದಿಗಳಾದ ಆನಂದ್ ಸ್ವಾಮಿ, ಅಣ್ಣಪ್ಪ, ನಿಂಗಪ್ಪ ಉಪಸ್ಥಿತರಿದ್ದರು.

# ಅರ್ಹ ಅಭ್ಯರ್ಥಿಗಳಿಗೆ ಹೆಚ್ಚುವರಿ ಸೀಟು ಸೃಷ್ಟಿಗೆ ಸುಪ್ರೀಂ ಅಸ್ತು



**ನವದೆಹಲಿ, ಆ. 3–** ಅರ್ಹತಾ ಆಧಾರಿತ ಶೈಕ್ಷಣಿಕ ಪ್ರವೇಶ ಪ್ರಕ್ರಿಯೆಯಲ್ಲಿ ಅನ್ಯಾಯಕ್ಕೊಳಗಾದ ಅರ್ಹ ಅಭ್ಯರ್ಥಿಗಳಿಗೆ ನ್ಯಾಯ ಒದಗಿಸಲು ಅಪರೂಪದ ಪ್ರಕರಣಗಳಲ್ಲಿ ಹೆಚ್ಚುವರಿ ಸೀಟು ಸೃಷ್ಟಿಸಲು ಅಥವಾ ಖಾಲಿ ಇರುವ ಸೀಟನ್ನು ಪರಿವರ್ತಿಸಲು ಸುಪ್ರೀಂ ಕೋರ್ಟ್ ಸಮ್ಮತಿಸಿದೆ.

ಯಾವುದೇ ತಪ್ಪಿಲ್ಲದಿದ್ದರೂ ಆಡಳಿತಾತ್ಮಕ ಗೊಂದಲಗಳಿಂದ ಪ್ರವೇಶಾವಕಾಶ ವಂಚಿತರಾಗುವ ಅಭ್ಯರ್ಥಿಗಳಿಗೆ ಪರಿಹಾರ ನೀಡಲು ಸಂವಿಧಾನದ ವಿಧಿ 142 ರ ಅಡಿಯಲ್ಲಿ ತನ್ನ ವಿಶೇಷ ಅಧಿಕಾರವನ್ನು ಬಳಸಿಕೊಳ್ಳಬಹುದು ಎಂದು ಅತ್ಯುನ್ನತ ನ್ಯಾಯಾಲಯ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಪ್ರಶಾಂತ್ ಕುಮಾರ್ ಮಿಶ್ರಾ ಹಾಗೂ ಸಂಜೀವ್ ಸಚ್ದೇವ್ ಅವರಿದ್ದ ಪೀಠವು, ಅಂಬಾಲಾದ ಮಹರ್ಷಿ ಮಾರ್ಕಂಡೇಶ್ವರ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸ್ನಾತಕೋತ್ತರ ವೈದ್ಯಕೀಯ ಸೀಟು ಹಂಚಿಕೆ ಪ್ರಕರಣದ ವಿಚಾರಣೆ ವೇಳೆ ಈ ಮಹತ್ವದ ತೀರ್ಪು ನೀಡಿದೆ.

ಅಂಬಾಲಾದ ವೈದ್ಯಕೀಯ ಕಾಲೇಜಿನಲ್ಲಿ ಎನ್‌ಆರ್‌ಐ ಕೋಟಾದಡಿ ಮಲ್ಯವಿ ಗುಪ್ತಾ ಎಂಬ ಅಭ್ಯರ್ಥಿಗೆ ಆರಂಭದಲ್ಲಿ ಸೀಟು ಹಂಚಿಕೆಯಾಗಿತ್ತು. ಆದರೆ, ಶುಲ್ಕವನ್ನು ಮೊದಲು ದೇಶೀಯ ಬ್ಯಾಂಕ್ ಖಾತೆಯಿಂದ ಪಾವತಿಸಲಾಗಿದೆ ಎಂಬ ಕಾರಣಕ್ಕೆ ಅವರ ಹಂಚಿಕೆಯನ್ನು ರದ್ದುಗೊಳಿಸಲಾಗಿತ್ತು (ನಂತರ ಎನ್‌ಆರ್‌ಐ ಖಾತೆಯಿಂದ ಪಾವತಿಸಲಾಗಿತ್ತು). ಇದೇ ವೇಳೆ ಮತ್ತೊಬ್ಬ ಅಭ್ಯರ್ಥಿ ರುಶಾಲಿ ಸಿಂಘಾಲ್ ಅವರಿಗೆ ಈ ಸೀಟು ನೀಡಲಾಗಿತ್ತು.

ಆದರೆ, ಕೌನ್ಸೆಲಿಂಗ್ ಪ್ರಕ್ರಿಯೆಯಲ್ಲಿ ಮಲ್ಯವಿ ಗುಪ್ತಾ ಅವರಿಗೆ ಭಾಗವಹಿಸಲು ಅವಕಾಶ ನೀಡದಿರುವುದು ತಪ್ಪು ಎಂದು ಗಮನಿಸಿದ ಸುಪ್ರೀಂ ಕೋರ್ಟ್, ಇಬ್ಬರೂ ಅಭ್ಯರ್ಥಿಗಳ ಹಿತದೃಷ್ಟಿಯಿಂದ ಖಾಲಿ ಇದ್ದ ಎಂಡಿ ಎನ್‌ಆರ್‌ಐ ಸೀಟನ್ನು ಎಂಎಸ್ ಕೋರ್ಸ್‌ಗೆ ಪರಿವರ್ತಿಸಿ, ಇಬ್ಬರಿಗೂ ಪ್ರವೇಶಾವಕಾಶ ಕಲ್ಪಿಸಿದೆ.

ವಿಶೇಷ ಸೂಚನೆ: ಈ ತೀರ್ಪು ಅತ್ಯಂತ ಅಪರೂಪದ ಸಂದರ್ಭದಲ್ಲಿ ನೀಡಲಾದ ವಿಶೇಷ ಆದೇಶವಾಗಿದ್ದು, ಇದನ್ನು ಭವಿಷ್ಯದ ಪ್ರಕರಣಗಳಿಗೆ 'ನಿದರ್ಶನ' ಎಂದು ಪರಿಗಣಿಸಬಾರದು ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

# ಯಾದಗಿರಿಯಲ್ಲಿ 24 ವರ್ಷದ ವಿವಾಹಿತೆ ಅನುಮಾನಾಸ್ಪದ ಸಾವು: ಗಂಡ ಮತ್ತು ಅತ್ತೆ ವಿರುದ್ಧ ಕೊಲೆ ಆರೋಪ




**ಯಾದಗಿರಿ:** ಯಾದಗಿರಿ ನಗರದ ಲಾಡ್ಜ್ ಗಲ್ಲಿ, ಸ್ಟೇಷನ್ ಏರಿಯಾ ನಿವಾಸಿಯಾಗಿದ್ದ 24 ವರ್ಷದ ವಿವಾಹಿತೆ ನಫೀಸಾ (ಪತಿ: ಮೊಹಮ್ಮದ್ ನಸುರುದ್ದೀನ್ ಚೌದರಿ) ಮೃತಪಟ್ಟಿರುವ ಘಟನೆ ನಗರದಲ್ಲಿ ಸಂಚಲನ ಮೂಡಿಸಿದೆ.

ಪೊಲೀಸರ ಪ್ರಾಥಮಿಕ ಮಾಹಿತಿಯ ಪ್ರಕಾರ, ನಫೀಸಾ ಮೂಲತಃ ಶಹಾಪುರ ನಿವಾಸಿಯಾಗಿದ್ದು, ಸುಮಾರು ಮೂರು ವರ್ಷಗಳ ಹಿಂದೆ ವಿವಾಹವಾಗಿದ್ದರು. ದಂಪತಿಗೆ ಮೂರು ವರ್ಷದ ಮಗು ಇದೆ.

ಮಗುವಿಗೆ ಹೊಡೆದ ವಿಚಾರವಾಗಿ ನಫೀಸಾ, ಆಕೆಯ ಪತಿ ಹಾಗೂ ಅತ್ತೆಯ ನಡುವೆ ಮಾತಿನ ಚಕಮಕಿ ನಡೆದಿದ್ದು, ಬಳಿಕ ಪತಿ ಮತ್ತು ಅತ್ತೆ ಸೇರಿ ಕುತ್ತಿಗೆ ಬಿಗಿದು ಕೊಲೆ ಮಾಡಿರುವ ಆರೋಪ ಕೇಳಿಬಂದಿದೆ. ಆದರೆ, ಘಟನೆಯ ನಿಖರ ಕಾರಣ ಇನ್ನೂ ಸ್ಪಷ್ಟವಾಗಿಲ್ಲ. ಈ ಎಲ್ಲ ಆರೋಪಗಳ ಕುರಿತು ಪೊಲೀಸರು ತನಿಖೆ ನಡೆಸುತ್ತಿದ್ದಾರೆ.ಘಟನೆಯ ಮಾಹಿತಿ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಯಾದಗಿರಿ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ರವಾನಿಸಲಾಗಿದೆ.

ಪ್ರಕರಣ ಸಂಬಂಧ ಮಹಿಳೆಯ ಪತಿ ಹಾಗೂ ಅತ್ತೆಯನ್ನು ಪೊಲೀಸರು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ಸುದ್ದಿ ಸಿದ್ಧಪಡಿಸುವ ವೇಳೆಗೆ ಅಧಿಕೃತ ಎಸ್‌ಐಆರ್ ದಾಖಲಾಗಿರಲಿಲ್ಲ. ಪ್ರಕರಣ ದಾಖಲಾದ ಬಳಿಕ ತನಿಖೆಯ ಆಧಾರದ ಮೇಲೆ ಹೆಚ್ಚಿನ ಮಾಹಿತಿ ಬಹಿರಂಗವಾಗುವ ಸಾಧ್ಯತೆ ಇದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಪೊಲೀಸರು ವಿವಿಧ ಆಯಾಮಗಳಲ್ಲಿ ತನಿಖೆ ಮುಂದುವರಿಸಿದ್ದು, ಮರಣೋತ್ತರ ಪರೀಕ್ಷೆಯ ವರದಿ ಹಾಗೂ ಇತರೆ ಸಾಕ್ಷ್ಯಾಧಾರಗಳ ಆಧಾರದ ಮೇಲೆ ಮುಂದಿನ ಕಾನೂನು ಕ್ರಮ ಕೈಗೊಳ್ಳಲಾಗುವುದು.

# ಬಸ್ ಪಲ್ಟಿ: 9 ಜನರಿಗೆ ಗಾಯ



**ನವಲಗುಂದ,ಆ3 :** ಬಸ್ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾ ಮ 9 ಜನರು ಗಾಯಗೊಂಡಿರುವ ಘಟನೆ ಭಾನುವಾರ ತಾಲೂಕಿನ ಅಮರಗೋಳ ಕ್ರಾಸ್ ಸಮೀಪ ನಡೆದಿದೆ. ಹುಬ್ಬಳ್ಳಿಯಿಂದ ವಿಜಯಪುರಕ್ಕೆ ತೆರಳು ತ್ತಿದ್ದ ಬಸ್‌ನಲ್ಲಿ ಒಟ್ಟು 38 ಜನ ಪ್ರಯಾಣಿಕರಿದ್ದರು. ಈ ಘಟನೆಯಲ್ಲಿ 9 ಪ್ರಯಾಣಿಕರಿಗೆ ಸಣ್ಣ–ಪುಟ್ಟ ಗಾಯಗಳಾಗಿರುವ ಕುರಿತು ವರದಿಯಾಗಿದೆ. ಪ್ರಾಥಮಿಕ ಮಾಹಿತಿಯ ಪ್ರಕಾರ ಬಸ್‌ನ ಟೈರ್‌ಸಿಡಿದ ಪರಿಣಾಮ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದೆ ಎಂದು ತಿಳಿದು ಬಂದಿದೆ. ಆದರೆ, ಅಪಘಾತಕ್ಕೆ ನಿಖರ ಕಾರಣವೇನು ಎಂಬುದು ತನಿಖೆಯ ಬಳಿಕವೇ ಸ್ಪಷ್ಟವಾಗಬೇಕಿದೆ.

ಅಪಘಾತ ನಡೆಯುತ್ತಿದ್ದಂತೆ ಸ್ಥಳೀಯ ಯುವಕರು ಹಾಗೂ ದಾರಿ ಹೋಕರು ಆಗ ಮಿಸಿ ಬಸ್ ಒಳಗಡೆ ಸಿಲುಕಿದ್ದ ಪ್ರಯಾ ಣಿಕರನ್ನು ಹೊರತೆಗೆದು ಗದಗ ಜಿಲ್ಲೆಯ ನರಗುಂದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕಳಿಸಿದರು. ಘಟನಾ ಸ್ಥಳಕ್ಕೆ ಸಿಪಿಐ ರವಿಕುಮಾರ ಕಪ್ಪತ್ತನವರ, ಪಿಎಸ್‌ಐ ಜನಾರ್ಧನ ಭಟ್ನಳ್ಳಿ ಹಾಗೂ ಪೊಲೀಸರು ಭೇಟಿ ನೀಡಿದ್ದರು.

# ಮಕ್ಕಳ ಸರ್ವತೋಮುಖ ವಿಕಾಸದಲ್ಲಿ ಶಿಕ್ಷಕರ, ಪಾಲಕರ ಪಾತ್ರ ಬಹು ದೊಡ್ಡದು



**ಔರಾದ್ :ಆ.3:** ಮಕ್ಕಳ ಸರ್ವತೋಮುಖ ವಿಕಾಸದಲ್ಲಿ ಶಾಲೆ ಮತ್ತು ಶಿಕ್ಷಕರಷ್ಟೇ ಪಾತ್ರವಲ್ಲದೆ ಕುಟುಂಬ ಹಾಗೂ ಪಾಲಕರದ್ದು ಕೂಡ ಅತ್ಯಂತ ಮಹತ್ವದಾಗಿದೆ ಎಂದು ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ಘಟಕ ಆಯುಕ್ತ ಡಾ. ಎಚ್. ಬಿ ಭರಶೆಟ್ಟಿ ಹೇಳಿದರು.

ತಾಲೂಕಿನ ಸಂತಪುರ ದೀಪಾಲಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಶುಕ್ರವಾರ ಏರ್ಪಡಿಸಿದ ಪಾಲಕರ ಮತ್ತು ಪೊಷಕರ ಸಭೆಯನ್ನು ಸಸಿಗೆ ನೀರೆರೆದು ಉದ್ಘಾಟಿಸಿ ಮಾತನಾಡಿದ ಅವರು, ಮಗು ಅತಿಹೆಚ್ಚಿನ ಸಮಯವನ್ನು ಪಾಲಕರೊಂದಿಗೆ ಕಳೆಯುವುದರಿಂದ ಮಗುವಿನ ಬಗ್ಗೆ ಹೆಚ್ಚಿನ ವಿಷಯಗಳನ್ನು ಶಿಕ್ಷಕರು ಅವರ ಪಾಲಕರಿಂದ ತಿಳಿಯಬೇಕು. ಮಗುವಿನ ತರಗತಿಯಲ್ಲಿನ ವರ್ತನೆಯನ್ನು ಶಿಕ್ಷಕರು ಮನದಾಳ ಮಾಡಿಕೊಳ್ಳಬೇಕು. ಪೊಷಕರು ಶಿಕ್ಷಕರಿಗಿಂತ ಹೆಚ್ಚಿನ ವಿದ್ಯಾವಂತರು ಆರ್ಥಿಕವಾಗಿ ಸಧೃಡರು ಆಗಿರಬಹುದು. ಆದರೆ ಪೊಷಕರ ಸಭೆಯಲ್ಲಿ ಅವರು ತಮ್ಮ ಪಾಂಡಿತ್ಯಪ್ರದರ್ಶನವನ್ನು ಮಾಡದೇ, ಶಿಕ್ಷಕರಿಗೆ ಸಲಹೆ–ಸೂಚನೆಗಳನ್ನು ನೀಡುವ ಬದಲಾಗಿ ಮಕ್ಕಳ ಶೈಕ್ಷಣಿಕತೆಗೆ ಸಂಬಂಧಿಸಿದ ಅವರ ಸಂದೇಹಗಳನ್ನು ಪರಿಹರಿಸಿಕೊಳ್ಳಬೇಕು. ಶಿಕ್ಷಕರೊಂದಿಗೆ ಗೌರವದಿಂದ ನಡೆದುಕೊಳ್ಳಬೇಕು ಎಂದರು.

ಪ್ರಾಂಶುಪಾಲೆ ಸಿಸ್ಟರ್ ಪ್ರೀತಿ ಮಾತನಾಡಿ, ಪ್ರತಿಬಾರಿ ಪೊಷಕರ ಸಭೆಯಲ್ಲಿನ ಪೊಷಕರ ಭಾಗವಹಿಸುವಿಕೆ ಮಗುವಿನ ಶೈಕ್ಷಣಿಕತೆಯ ಬಗ್ಗೆ ಅವರು ಹೊಂದಿರುವ ಆಸಕ್ತಿಯನ್ನು ಸೂಚಿಸುತ್ತದೆ. ಮಗುವಿನ ನಡವಳಿಕೆಗಳ ಬಗ್ಗೆ ಶಿಕ್ಷಕರು ಮಾತನಾಡುವಾಗ ಜಾಗರೂಕತೆಯಿಂದ ಗಮನಿಸಿ. ಮಗುವಿನ ಓದು–ಬರಹಗಳ ಬಗ್ಗೆ ಸಹಕಾರ ನೀಡುವಲ್ಲಿ ಪೊಷಕರ ಸಭೆ ಮಹತ್ವದ ಪರಿಣಾಮವನ್ನು ಬೀರುವುದು. ನಿಮ್ಮ ಮಗುವಿನ ಆಸಕ್ತಿ ಮತ್ತು ಅಗತ್ಯಗಳನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳಿ. ನಿಮ್ಮ ಮಗುವಿನ ಗ್ರಹಿಸುವಿಕೆ ಮತ್ತು ತರಗತಿಯಲ್ಲಿನ ವರ್ತನೆಯನ್ನು ತಿಳಿಯಿರಿ. ಮೌಲ್ಯಗಳ ಬೆಳವಣಿಗೆಗಾಗಿ ಶಾಲೆ ಅಥವಾ ತರಗತಿಯಲ್ಲಿ ಹಮ್ಮಿಕೊಳ್ಳಲಾದ ಚಟುವಟಿಕೆಗಳ ಬಗ್ಗೆ ತಿಳಿಯಿರಿ.ಪಠ್ಯೇತರ ಚಟುವಟಿಕೆಗಳಲ್ಲಿ ಮಗುವಿನ ಭಾಗವಹಿಸುವಿಕೆ ಹಾಗು ಸಮವಯಸ್ಕರೊಂದಿಗೆ ನಿಮ್ಮ ಮಗುವಿನ ಒಡನಾಟವನ್ನು ತಿಳಿಯಿರಿ. ಮಗುವಿಗೆ ಶಾಲೆಯಿಂದ ನೀಡುವ ಮನೆಗೆಲಸ ಮಾಡಿಸುವಲ್ಲಿ ಮಗುವಿಗೆ ಅಥವಾ ನಿಮಗೆ ಎದುರಾದ ಸಂದೇಹ ಮತ್ತು ಸಮಸ್ಯೆಗಳಿದ್ದಲ್ಲಿ ಕೇಳಿ ಪರಿಹರಿಸಿಕೊಳ್ಳಿ. ಯಾವ ವಿಷಯದ ಕಲಿಕೆಗೆ ಸಂಬಂಧಿಸಿದಂತೆ ಮಗುವಿಗೆ ಹೆಚ್ಚಿನ ತರಬೇತಿ ಮತ್ತು ಸಹಕಾರದ ಅಗತ್ಯವಿದೆ ಎಂಬುದನ್ನು ತಿಳಿಯಿರಿ ಎಂದರು.

ಈ ಸಂದರ್ಭದಲ್ಲಿ ಪಿಟಿಎ ಅಧ್ಯಕ್ಷ ಶಿವಕಾಂತ ಮಠಪತಿ, ಸಿಸ್ಟರ ರೇಷ್ಮಾ, ಶಿವಾನಂದ ಸ್ವಾಮಿ ಸೇರಿದಂತೆ ಇನ್ನಿತರರಿದ್ದರು. ಶಿಕ್ಷಕ ಮಲ್ಲಹರಾವ ಶಾಲೆಯ ವಾರ್ಷಿಕ ವರದಿ ವಾಚಿಸಿದರು. ರೆಬೇಕಾ ರಾಣಿ ಸ್ವಾಗತಿಸಿದರು. ಶಿಕ್ಷಕಿ ಶ್ರೀದೇವಿ ವಂದಿಸಿದರು.

ಶಿಕ್ಷಕಿ ರೋಸ್ಲಿನ್ ರಾಣಿ ನಿರೂಪಣೆ ಮಾಡಿದರು.

# ಸೌಹಾರ್ದ ಸಂಘ ಸಂಸ್ಥೆಗಳು ಜನ ಸಹಕಾರಿಯಾಗಿ ಕೆಲಸ ಮಾಡುತ್ತಿವೆ: ನೀಲಕಂಠ ಮೂಲಗೆ

**ಕಲಬುರಗಿ:ಆ.3:**ಸೌಹಾರ್ದ ಸಹಕಾರಿ ಸಂಘಗಳು ಇಂದು ರಾಜ್ಯಾದ್ಯಂತ ರಾಷ್ಟ್ರೀಕರತ ಬ್ಯಾಂಕಗಳಿಗೆ ಪೈಪೋಟಿಯಾಗಿ ಬೆಳೆಯುತ್ತಿವೆ.ಜನರ ಸಹಕಾರಿಯಾಗಿ ಕೆಲಸ ಮಾಡುತ್ತಿವೆ ಎಂದು ಉದ್ಯಮಿ ಹಾಗೂ ಕಾಂಗ್ರೆಸ್ ಮುಖಂಡ ನೀಲಕಂಠ ಮೂಲಗೆ ಅವರು ಶ್ಲಾಘೀಸಿದರು.

ನಗರದ ಸಪ್ತಗಿರಿ ಹೋಟೇಲ್ ಸಭಾಂಗಣದಲ್ಲಿ ಕಲಬುರಗಿ ಚಾಣಕ್ಯ ಸೌಹಾರ್ದ ಸಹಕಾರಿ ಸಂಘ ನಿಯಮಿತ ಹಮ್ಮಿಕೊಂಡಿದ್ದ 3 ನೆಯ ಸಾಮಾನ್ಯ ಸಭೆ ಹಾಗೂ ವಾರ್ಷಿಕೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು ಸೌಹಾರ್ದ ಸಂಘಗಳು ಕಡಿಮೆ ದರದಲ್ಲಿ ಹಾಗೂ ಸಕಾಲಕ್ಕೆ ಸಾಲ ನೀಡುತ್ತಿವೆ.ಇದರಿಂದ ರೈತರಿಗೆ,ವ್ಯಾಪಾರಸ್ಥರಿಗೆ ಹಾಗೂ ಸಾಮಾನ್ಯ ಜನರಿಗೂ ಬಹಳಷ್ಟು ಸಹಾಯವಾಗುತ್ತಿವೆ ಎಂದರು.

ಶ್ರೀನಿವಾಸ ಸರಡಗಿಯ ಮಹಾಲಕ್ಷೀ ಶಕ್ತಿ ಪೀಠದ ಪೂಜ್ಯ ಡಾ.ಅಪ್ಪಾರಾವ ದೇವಿ ಮುತ್ಯಾ ಅವರು ದಿವ್ಯಸಾನಿಧ್ಯ ವಹಿಸಿ ಮಾತನಾಡಿದ ಅವರು ಇಂದು ಸೌಹಾರ್ದ ಸಹಕಾರಿ ಸಂಘಗಳು ಜನರ ಹೆಚ್ಚಿನ ವಿಶ್ವಾಸ ಗಳಿಸುತ್ತಿವೆ.ಸಂಘದ ಜೊತೆ ಸಂಬಂಧ ಹಾಗೂ ವ್ಯವಹಾರ ಉತ್ತಮ ಇದ್ದರೆ ಆಪತ್ಕಾಲದಲ್ಲಿ ನೆರವಿಗೆ ಬರುತ್ತವೆ ಎಂದು ಸದಸ್ಯರಿಗೆ ಕಿವಿಮಾತು ಹೇಳಿದರು.ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕಲಬುರಗಿ ಸೌಹಾರ್ದ ಒಕ್ಕೂಟದ ಅಧ್ಯಕ್ಷ ಎಸ್.ಎಸ್.ಪಾಟೀಲ ಮಾತನಾಡಿ ಅಲ್ಪ ಸಮಯದಲ್ಲೇ ಕಲಬುರಗಿ ಚಾಣಕ್ಯ ಸೌಹಾರ್ದ ಸಹಕಾರಿ ಸಂಘ ಎತ್ತರಕ್ಕೆ ಬೆಳೆದಿದೆ.ಇದಕ್ಕೆ ಸದಸ್ಯರೊಂದಿಗೆ ಇರುವ ಒಡನಾಟವೇ ಕಾರಣ ಎಂದು ಶ್ಲಾಘೀಸಿದರು.ಸಂಘದ ಅಧ್ಯಕ್ಷತೆ ವಹಿಸಿ ಮಾತನಾಡಿದರು.ಡಾ.ಲಿಂಗರಾಜ ಸಿರಗಾಪೂರ ಅಧ್ಯಕ್ಷತೆ ವಹಿಸಿದ್ದರು.ಹೋರಾಟಗಾರ ಡಾ.ಎ.ಎಸ್ .ಭದ್ರಶೆಟ್ಟಿ ವೇದಿಕೆ ಮೇಲೆ ಇದ್ದರು.ನಿರ್ದೇಶಕ



ಸೂರ್ಯಕಾಂತ ಸೂಜಾತ್ಯ ಸ್ವಾಗತಿಸಿದರು.ಜಿ.ಜಿ.ವಣಿಕ್ಯಾಳ ನಿರೂಪಿಸಿದರು.ಉಪಾಧ್ಯಕ್ಷ ಶಿವರಾಜ ಜಮಶೆಟ್ಟಿ,ನಿರ್ದೇಶಕರುಗಳಾದ ಬಸವರಾಜ ಮಾಗಿ,ಪ್ರಭು ಪಾಟೀಲ,ಪದಮಗುಂಡ ಕಣಮಸ್,ಶಿವಶಂಕರ ಪಾಟೀಲ,ಸಂಜೀವಕುಮಾರ ಕರಿಕಲ್,ರೇಷ್ಮಾ ಸಿರಗಾಪೂರ,ಸಾವಿತ್ರಿ ತೆಲಕುಣಿ ಮುಖ್ಯಕಾರ್ಯ ನಿರ್ವಾಹಕ ಮಂಜುನಾಥ ಸಿರಗಾಪೂರ,ಸದಸ್ಯರಾದ ಸೂರ್ಯಕಾಂತ ಕೆ.ಬಿ,ಮಲ್ಲಿನಾಥ ಸಂಗಶೆಟ್ಟಿ,ಅಮೀತ ನಾಗನಹಳ್ಳಿ,ಶಿವು ಧಂಗಾಪೂರ,ಗುರುಲಿಂಗಪ್ಪ ಟೆಂಗಳಿ,ಶಿವುಕುಮಾರ ಬಗಲೂರ,ಮಲ್ಲಯ್ಯಸ್ವಾಮಿ ಗಂಗಾಧರ ಮಠ,ಮನೋಹರ ಬಡಶೇಷಿ,ಕುಸುಮಾವತಿ,ವಿಜಯಲಕ್ಷೀ ಪಾಟೀಲ,ಗೀತಾ ಸಿರಗಾಪೂರ ಸೇರಿದಂತೆ ನೂರಾರು ಸದಸ್ಯರು ಭಾಗವಹಿಸಿದ್ದರು.

# ಮಗುವಿಗೆ ತಾಯಿಯ ಎದೆ ಹಾಲು ಅಮೃತಕ್ಕೆ ಸಮಾನ

**ಕಲಬುರಗಿ :** ಬೆಳವಣಿಗೆಗೆ ಸ್ತನ್ಯಪಾನವು ಅತ್ಯಂತ ಮುಖ್ಯವಾಗಿದೆ. ಇದು ಮಗುವಿಗೆ ಉತ್ತಮ ಪೊಷಣೆ, ರೋಗನಿರೋಧಕ ಶಕ್ತಿ ಹಾಗೂ ತಾಯಿಯೊಂದಿಗೆ ನಂಟು ನೀಡುತ್ತದೆ. ಮಗುವಿಗೆ ಎದೆ ಹಾಲು ಅಮೃತಕ್ಕೆ ಸಮಾನವಾಗಿದೆ ಎಂದು ವೈದ್ಯಾಧಿಕಾರಿ ಡಾ. ಅನುಪಮಾ ಎಸ್.ಕೇಶ್ವಾರ ಹೇಳಿದರು. ನಗರದ ಶೇಖರೋಜಾದಲ್ಲಿನ 'ಶಹಾಬಜಾರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ಸಹಯೋಗದೊಂದಿಗೆ ಶನಿವಾರ ಜರುಗಿದ "ವಿಶ್ವ ಸ್ತನ್ಯಪಾನ ಸಪ್ತಾಹ" ಕಾರ್ಯಕ್ರಮದಲ್ಲಿ ಜಾಗೃತಿಯ ಕರಪತ್ರಗಳನ್ನು ವಿತರಿಸಿ, ಅವರು ಮಾತನಾಡುತ್ತಿದ್ದರು.



ಮಗುವಿನ ಬೆಳವಣಿಗೆಗೆ ಬೇಕಾದ ಎಲ್ಲ ಪೊ?ಷಕಾಂಶಗಳು ಎದೆಹಾಲಿನಲ್ಲಿ ಇರುತ್ತವೆ. ಇದು ಜ್ವರ, ಶೀತ ಮತ್ತು ಹೊಟ್ಟೆನೋಡಿನಂತಹ ಕಾಯಿಲೆಗಳಿಂದ ಮಗುವನ್ನು ರಕ್ಷಿಸುತ್ತದೆ. ಮಗುವಿನ ಹೊಟ್ಟೆಗೆ ಬಹಳ ಸುಲಭವಾಗಿ ಜೀರ್ಣವಾಗುತ್ತದೆ. ಇದು ಹೆರಿಗೆಯ ನಂತರ ತಾಯಿಯ ದೇಹವು ಬೇಗ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ. ಗರ್ಭಧಾರಣೆಯ ನಂತರ ಹೆಚ್ಚಾದ ತೂಕವನ್ನು ಕಡಿಮೆ ಮಾಡಲು ಇದು ಸಹಾಯ ಮಾಡುತ್ತದೆ.

ತಾಯಿಯಲ್ಲಿ ಮಾನಸಿಕ ಒತ್ತಡ ಮತ್ತು ಖಿನ್ನತೆಯನ್ನು ಕಡಿಮೆ ಮಾಡುತ್ತದೆ ಎಂದು ಸ್ತನ್ಯಪಾನದ ಮಹತ್ವವನ್ನು ವಿವರಿಸಿದರು. ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಹಾಗೂ ಉಪನ್ಯಾಸಕ ಎಚ್.ಬಿ.ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್. ಬಿರಾದಾರ ಹಾಗೂ ಆರೋಗ್ಯ ಕೇಂದ್ರದ ಸಿಬ್ಬಂದಿ, ಬಡಾವಣೆಯ ನಾಗರಿಕರು, ಮಹಿಳೆಯರು ಭಾಗವಹಿಸಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE